ಜನಪದ ವಿಚಾರ


ಬೆಲೆ : ರೂ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೪ ಜನೆವರಿ-೨೦೧೪ ಸಂಚಿಕೆ-೬



ಆಮ್‌ಆದ್ಮಿ ಸಜ್ಜನಶಕ್ತಿಯಾಗಿ ಹೊರಹೊಮ್ಮಲಿ

ಜನಪದ ವಿಚಾರದಲ್ಲಿ

ಜನವರಿ - ೨೦೧೪

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಜನೆವರಿ - ೨೦೧೪
ಸಂಪುಟ - ೧೪
ಸಂಚಿಕೆ - ೬

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆ 08236 316344
✆ 08236 299854
e-mail : janapada@yahoo.com
web: janapada.net

ಮರದವ್ವ...

ತಾಯಿ ನಮ್ಮವ್ವಾ
ಕೊನೆಗೂ ಕಣ್ತೆರೆದೆಯೇನವ್ವಾ!
ಭೂಮಿತಾಯಿಯ ಅವತಾರ ನೀನವ್ವಾ
ನಿನ್ನನು ಮರೆತಿರುವರೆಲ್ಲ ಮುಠ್ಠಾಳರವ್ವಾ

ತಾಯ ಮಡಿಲ ಬರಿದಾಗಿಸುತಿಹರು
ಬಗೆದು-ಮೊಗೆದು ಮಾರಿಕೊಳ್ಳುತಿಹರು
ದನಿಯೆತ್ತಿದವರಿಗೆ ದನಿಯಡಗಿಸುತಿಹರು
ತಾಯಮಡಿಲ ಮಮತೆಯನರಿಯದ ಕಟುಕರು

ಅವ್ವಾ! ನೀನಾದರೂ ಎಷ್ಟು ದಿನ ತಾಳುವೆ
ಸುಡು ಬಿಸಿಲಿನ ಝಳವನ್ನು ಸೃಷ್ಟಿಸಿರುವೆ
ಕುಡಿವ ನೀರಿಗಾಗಿ ಪರದಾಡುವಂತಾಗಿಸಿರುವೆ
ಮರದವ್ವನಾಗಿ ಮರದಲ್ಲಿ ಕಣ್ಣು ಬಿಟ್ಟಿರುವೆ

ಅರಿತುಕೊಳ್ಳಲಿಲ್ಲ ಮನುಷ್ಯಜಾತಿ ಎಂದೆಂದು
ಎಚ್ಚರಿಸಿದಿ ಹಲವು ರೂಪಗಳಲ್ಲಿ ಬಂದು
ಗಟ್ಟಿ ಉಳಿದಿದೆ ಜೊಳ್ಳು ಹಾರಿದೆ ಇಂದು
ಕಡುಕೋಪದ ಕೆಂಗಣ್ಣು ತೆರೆಯಿತಿಂದು

ಕಾದಿದೆ ಅವ್ವನ ಅವತಾರದ ಘೋರತೆ
ಮಿತಿ ಮೀರಿದೆ ಕಟುಕರ ಕ್ರೂರತೆ
ತಪ್ಪಿಸಿಕೊಳ್ಳುವ ಕಳ್ಳಾಟದ ನಾಟಕೀಯತೆ
ಗಜಮುಖನೆಂದು ಕೈಮುಗಿವರು ಸಮಾಧಾನಕೆ

ಸೃಷ್ಟಿ-ಸ್ಥಿತಿ-ಲಯಗಳಿಗೆ ಮೂಲ ನಮ್ಮವ್ವಾ
ಉಗ್ರರೂಪಿಣಿಯೆಂಬರು ಅಕ್ಷರಪಂಡಿತರವ್ವಾ
ಹೊಗಳಿಸಿಕೊಂಡು ಸುಮ್ಮನೇಕೆಯಿದ್ದೆಯವ್ವಾ
ಅದೃಶ್ಯರೂಪ ತೊರೆದುಬಂದು ಶಿಕ್ಷಿಸವ್ವಾ

ಶರಣು ಶರಣು ತಾಯೆ ಮರದವ್ವಾ
ಮರವನದಲ್ಲಿ ಪ್ರಕಟಗೊಂಡಿರುವಿಯವ್ವಾ
ಪ್ರಕೃತಿವಿರೋದಿಗಳಿಗೆ ಪಾಠಲಿಸವ್ವಾ
ಬುದ್ಧಿಯೆಂಬ ಅರಿವಿನ ಜೋಗುಳ ಹಾಡವ್ವಾ!

- ಹಿಪ್ಪರಗಿ ಸಿದ್ಧರಾಮ್

ವಿಚಾರ ದೀಪ್ತಿ

ಭರತ ಖಂಡದಲ್ಲಿ ಕ್ರಾಂತಿಕಾಳಿ ಕಾನೂನು ಬದ್ಧವಾಗಿ ಹೆಜ್ಜೆ ಇಟ್ಟು, ನಿಧಾನವಾಗಿ ಬರುತ್ತಿದ್ದಾಳೆ: ಗಾಂಧೀಜಿಯವರ ಅಹಿಂಸಾತತ್ವವನ್ನಾಶ್ರಯಿಸಿ ಬಂದಂತೆ ವಿನೋಬಾರವರ ಭೂದಾನ ಯಾತ್ರೆಯ ಭಾಷಣ ಮತ್ತು ಉಪದೇಶಗಳ ರೂಪದಲ್ಲಿಯೂ ಬರುತ್ತಿದ್ದಾಳೆ.

ನಾವು ಪರಕೀಯರಿಂದ ಆಕ್ರಾಂತರಾಗಿದ್ದವರು. ಈಗ ನಮ್ಮನ್ನು ನಮ್ಮವರೇ ಆಳುತ್ತಿದ್ದಾರೆ. ಕೇವಲ ಅಧಿಕಾರ ಬದಲಾವಣೆಯಿಂದಲೇ ನಮಗೆ ಪೂರ್ಣ ಮುಕ್ತಿ ದೊರೆಯುವುದಿಲ್ಲ. ಪಂಚವಾರ್ಷಿಕ ಯೋಜನೆಗಳು ಕಾರ್ಯಗತವಾಗಲು ಪ್ರಯೋಜನಕಾರಿಯಾಗಲು ಹಿರಿಯರ ಹರಕೆ ಬೇಕು. ತಜ್ಞರ ವಿವೇಕ ಇರಬೇಕು. ತರುಣರ ಶಕ್ತಿಯ ಮತ್ತು ಎಲ್ಲ ಜನರ ದುಡಿಮೆಯ ನೆರವು ಬೇಕು. ನಿಮ್ಮಲ್ಲಿ ಪ್ರತಿಯೊಬ್ಬರಿಗೂ ಪ್ರತಿಯೊಬ್ಬರ ಹೃದಯದ ಸಾಹಸಕ್ಕೂ ಅವಕಾಶವಿದೆ. ಯಕ್ಷಿಣಿ ವಿದ್ಯೆಯಿಂದ ಏನೂ ಆಗಲಾರದು. ಎಲ್ಲರೂ ಸೇರಿ ಸರ್ಕಾರದೊಡನೆ ದುಡಿಯಬೇಕು. ಎಲ್ಲರೂ ಕರ್ತವ್ಯಶೀಲರಾಗಿ ತಪಸ್ವಿಗಳಾಗಿ ಮುಂದುವರೆದರೆ ದೇಶದ ಕ್ಷೇಮ, ಸಮಾಜದ ಕ್ಷೇಮ, ವ್ಯಕ್ತಿಯ ಕ್ಷೇಮ ಸಾಧ್ಯವಾಗುತ್ತದೆ.

ನಾನು ಈಗಾಗಲೇ ಹೇಳಿರುವ ಮಾತುಗಳು ಅಷ್ಟು ಸ್ವಾರಸ್ಯವಾಗಿರಲಾರವು. ನಾನು ವಿನೋದಗೊಳಿಸಲು ಬಂದಿಲ್ಲ. ಕಹಿಯಾದರೂ ಚಿಂತೆಯಿಲ್ಲ. ನಿಜವನ್ನಿಡಲು ಬಂದಿದ್ದೇನೆ. ಒಬ್ಬನ ಜೀವನಪಥ ಮತ್ತೊಬ್ಬನ ಬದುಕನ್ನು ನಿರ್ಣಯಿಸಲಾರದು. ಸಂಚಿತ–ಪ್ರಾರಬ್ಧ–ಆಗಾಮಿ ಕರ್ಮಗಳು, ಸಾಮಾಜಿಕ ಪ್ರಾಕೃತಿಕ ಸನ್ನಿವೇಶಗಳು, ಮೇಲಾಗಿ ಸ್ವಯಂಕ್ರಿಯೆ ಪ್ರತಿಯೊಬ್ಬನ ಬಾಳನ್ನು ನಿರ್ಣಯಿಸಬೇಕು. ರೂಪಿಸಬೇಕು. ಒಂದೇ ಜೀವನೋದ್ದೇಶದ ಎರಕದಲ್ಲಿ ಎಲ್ಲವನ್ನೂ ಕರಗಿಸಿ ಏಕರೂಪತೆಯನ್ನು ಸಾಧಿಸುವ ಪ್ರಯತ್ನ ನಿಷ್ಫಲ. ನಿಮ್ಮ ಸ್ವಂತ ಪ್ರಯತ್ನದಿಂದ ನಿಮ್ಮ ಬಾಳಿನ ಗುರಿಯನ್ನು ಸಾಧಿಸಿಕೊಳ್ಳಬೇಕು. ನಿಮ್ಮ ವಿದ್ಯಾರ್ಥಿ ಜೀವನವನ್ನು ಮಾತ್ರ ವ್ಯರ್ಥಗೊಳಿಸಬೇಡಿ. ಯಾವ ರೀತಿಯ ತಪಸ್ಸತು ನಿಮಗೆ ಸೂಕ್ತವೆಂದು ತೋರುವುದೊ ಅದನ್ನು ಆಚರಿಸಿ.

– ಕುವೆಂಪು

ಆಮ್‌ಆದ್ಮಿ ಪಕ್ಷ ಸಜ್ಜನಶಕ್ತಿಯಾಗಿ ಹೊರಹೊಮ್ಮಬೇಕು

– ಸುರೇಂದ್ರ ಕೌಲಗಿ

"ಜನಾಂದೋಲನವೊಂದು ವ್ಯವಸ್ಥೆಯ ಮೇಲೆ ನೈತಿಕ ಒತ್ತಡ ಹೇರುವುದರಲ್ಲಿ ಯಶಸ್ವಿಯಾಗಿರುವುದಕ್ಕೆ ಸಾಕ್ಷಿ ಎಂಬಂತೆ ಲೋಕಪಾಲ ಮಸೂದೆ ಸಂಸತ್ತಿನಲ್ಲಿ ಅಂಗೀಕಾರ ಪಡೆದಿದೆ" ಎಂಬ ಈ ವಾಕ್ಯ ಪ್ರಸಿದ್ಧ ದಿನಪತ್ರಿಕೆಯೊಂದರ ಡಂಗುರವಾಗಿದೆ. ಇದೇ ಚಿಂತನೆಯ ದಾರಿಯಲ್ಲಿ ಆಲೋಚಿಸುತ್ತಾ, ಚಿಂತನೆಮಾಡುತ್ತಾ ಹೋದಲ್ಲಿ 'ಆಮ್‌ಆದ್ಮಿ ಪಕ್ಷ' ಒಂದು ರಾಜಕೀಯ ಪಕ್ಷವಾಗಿ ತನ್ನ ಅಸ್ತಿತ್ವವನ್ನು ಸೀಮಿತಗೊಳಿಸಿಕೊಳ್ಳದೆ ವ್ಯವಸ್ಥೆಯ ಮೇಲೆ ದೇಶದ ಜನರ ಅಂಕುಶವಿರುವಂಥ ಸಜ್ಜನಶಕ್ತಿಯಾಗಿ ರೂಪುಗೊಳ್ಳುವುದು ಇಂದಿನ ಕಾಲಧರ್ಮಕ್ಕೆ ಅಗತ್ಯವೆಂದೆನಿಸುತ್ತದೆ. ಯಾವುದೇ ಪ್ರಕಾರದ ರಾಜ್ಯವ್ಯವಸ್ಥೆಯಿರಲಿ ಜನತೆಯನ್ನು ನಿಯಂತ್ರಣದಲ್ಲಿ ಇಡುವುದು ಒಂದು ರಾಜ್ಯಶಕ್ತಿ (State Power), ಇನ್ನೊಂದು ದಂಡಶಕ್ತಿ (Military Power). ಈ ಎರಡು ಶಕ್ತಿಗಳನ್ನು ನಿಯಂತ್ರಿಸುವ ಶಕ್ತಿ ಬೇರೊಂದಿಲ್ಲದಿದ್ದರೆ ಆ ಎರಡು ಶಕ್ತಿಗಳು ನಿರಂಕುಶವಾಗಿ ವರ್ತಿಸುತ್ತವೆ. ಸಮಾಜ ವ್ಯವಸ್ಥೆಯನ್ನು ಶಿಥಿಲಗೊಳಿಸುತ್ತವೆ. ಸಮಾಜದಲ್ಲಿ ಯಾವಾಗಲೂ ಬಂಡಾಯದ ವಾತಾವರಣವಿರುತ್ತದೆ. ಇಂಥ ಸಮಾಜಆರೋಗ್ಯಹಿತವಿರೋಧಿ ಪರಿಸ್ಥಿತಿ ತಪ್ಪಬೇಕಾದರೆ ಸಜ್ಜನಶಕ್ತಿಯೊಂದು ರೂಪಾಂತರಗೊಂಡು ಲೋಕಶಕ್ತಿಯಾಗಿ (Peoples' Power) ಹೊರಹೊಮ್ಮಬೇಕು ಮತ್ತು ಅದು ಸದಾ ಕಾಲವೂ ಸಕ್ರಿಯವಾಗಿರಬೇಕು. ಇಂಥ ಲೋಕಶಕ್ತಿಯ ಬೀಜವನ್ನು ದೇಶದ ಪ್ರಜಾಪ್ರಭುತ್ವದ ನೆಲದಲ್ಲಿ ಬಿತ್ತಿರುವ ಕೆಲಸವನ್ನು ಆಮ್‌ಆದ್ಮಿ ಪಕ್ಷ ಈಗ ಮಾಡಿದೆ. ೧೫ವರ್ಷಗಳಿಂದ ದೇಶದ ರಾಜಧಾನಿ ಕೇಂದ್ರಾಡಳಿತ ಪ್ರದೇಶದಲ್ಲಿ ಬೀಡುಬಿಟ್ಟಿದ್ದ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರದ ಗದ್ದುಗೆಯಿಂದ ಇಳಿಸಿದ್ದು ಮತ್ತು ಬಿಜೆಪಿಯಂಥ ಬಲವಾದ ಪಕ್ಷವನ್ನು ಹಿಮ್ಮೆಟ್ಟಿಸಿದ್ದು ಸಾಮಾನ್ಯ ಸಂಗತಿಯಲ್ಲ. ಇದಕ್ಕೂ ಮೊದಲು ಅಣ್ಣಾ ಹಜಾರೆ ಮತ್ತು ಅರವಿಂದ ಕೇಜ್ರೀವಾಲರಂಥ ನಾಯಕತ್ವದಲ್ಲಿ ನಡೆದ ಭ್ರಷ್ಟಾಚಾರ ವಿರೋಧಿ ಆಂದೋಲನ ಈ ಯಶಸ್ಸಿಗೆ ಬಹುಮಟ್ಟಿಗೆ ಕಾರಣವೆಂದು ಹೇಳಬಹುದು.

ಹತ್ತು ವರ್ಷದಿಂದ ನೆನೆಗುದಿಗೆ ಬಿದ್ದಿದ್ದ ಲೋಕಪಾಲ್ ಮಸೂದೆ ಲೋಕಸಭೆಯಲ್ಲಿ ಚರ್ಚೆಯಿಲ್ಲದೆ ಸ್ವೀಕೃತವಾದದ್ದು ಕೂಡ ಭ್ರಷ್ಟಾಚಾರ ವಿರೋಧಿ ಆಂದೋಲದ ಕಾರಣವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಈ ಭ್ರಷ್ಟಾಚಾರ ವಿರೋಧಿ ಆಂದೋಲನ ಕೇವಲ ತಾತ್ಕಾಲಿಕವಾದ ರಾಜಕೀಯ

ಜಯಗಳಿಂದ ಸಮಾಧಾನಗೊಳ್ಳದೆ ಇನ್ನು ಮುಂದೆ ಮಾಡಬೇಕಿರುವ ಹೊಸ ಮೌಲ್ಯಾಧಾರಿತ ಹೊಸ ಸಮಾಜದ ನಿರ್ಮಾಣಕ್ಕೆ ತೊಡಗಿಕೊಳ್ಳುವ ಕೆಲಸಮಾಡಬೇಕಿದೆ. ಹೊಸ ಸಮಾಜದಂಥ ನಿರ್ಮಾಣದ ಕೆಲಸ ಯಾವತ್ತಿಗೂ ರಾಜಕೀಯ ಪಕ್ಷದ ಮೂಲಕ ಸಾಧ್ಯವಾಗುವುದಿಲ್ಲ. ಆದ್ದರಿಂದ ಆಮ್‌ಆದ್ಮಿ ಪಕ್ಷ ಲೋಕಶಕ್ತಿಯನ್ನು ನಿರ್ಮಾಣಮಾಡುವ ಕೆಲಸದಲ್ಲಿ ತೊಡಗಬೇಕು. ಲೋಕಶಕ್ತಿ ನಿರ್ಮಾಣದ ಕೆಲಸ ರಾಜಕೀಯ ಕ್ರಿಯೆಯಲ್ಲ, ಅದೊಂದು ಪರಿಶುದ್ಧವಾದ ರಚನಾತ್ಮಕ ಕೆಲಸ. ಆಮ್‌ಆದ್ಮಿ ಪಕ್ಷಕ್ಕೆ ಹೊಸದಾಗಿ ಸೇರಿಕೊಂಡಿರುವ ಮಾಹಿತಿ ತಂತ್ರಜ್ಞಾನದ ಮತ್ತು ಕಾರ್ಪೊರೇಟ್ ಕ್ಷೇತ್ರದ ಹೊಸ ಪೀಳಿಗೆಯ ಯುವಕರು ಇದುವರೆಗಿನ ಎಲ್ಲ ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆ ಬಗ್ಗೆ ಅಸಮಾಧಾನಗೊಂಡಿದ್ದಾರೆ. ಅವರು ತಮ್ಮ ಆಧುನಿಕ ಐಷಾರಾಮಿ ಜೀವನಶೈಲಿಯಿಂದಲೂ ಬೇಸತ್ತಿದ್ದಾರೆ. ಅವರ ಮನದಲ್ಲಿ ಯಾವುದೋ ಒಂದು ತೀವ್ರತಮವಾದ ಬದಲಾವಣೆಗಾಗಿ ಅಸಂತೋಷ ಕುದಿಯುತ್ತಿದೆ. ಹೊಸ ಪೀಳಿಗೆಯ ಯುವಕರ ಮನದಲ್ಲಿರುವ ಈ ಕುದಿತಕ್ಕೆ ಹೊರಬರಲು ಒಂದು ಸೂಕ್ತ ಮಾರ್ಗ ದೊರೆಯದೇ ಹೋದಲ್ಲಿ ದೇಶ ಇನ್ನೂ ಭಯಂಕರವಾದ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ ಎಂಬುದು ನಮ್ಮ ಜ್ಞಾಪಕದಲ್ಲಿರಬೇಕು. ಅರವಿಂದ ಕೇಜ್ರೀವಾಲ್ ಮತ್ತು ಅವರ ಸಮಾನ ಮನಸ್ಕ ಯುವತಂಡದ ಮೇಲೆ ಲೋಕಶಕ್ತಿ ನಿರ್ಮಾಣದಂಥ ಹೊಸಚಿಂತನೆಯನ್ನು ಮಾಡುವ ಜವಾಬ್ದಾರಿಯಿದೆ. ಈ ಮೊದಲು ೧೯೭೫ರಲ್ಲಿ ತುರ್ತುಪರಿಸ್ಥಿತಿಯನ್ನು ಸುಗ್ರೀವಾಜ್ಞೆ ಮೂಲಕ ಹೇರಿದಾಗ ಲೋಕನಾಯಕ ಜಯಪ್ರಕಾಶ ನಾರಾಯಣರು ಪ್ರಾರಂಭಿಸಿದ್ದ ನವ ನಿರ್ಮಾಣ ಮತ್ತು ಸಂಪೂರ್ಣಕ್ರಾಂತಿಯಂಥ ಜನಾಂದೋಲನಗಳ ಉದ್ದೇಶವೂ ಕೂಡ ಲೋಕಶಕ್ತಿಯ ನಿರ್ಮಾಣಮಾಡಿ ರಾಜ್ಯ ಮತ್ತು ದಂಡಗಳನ್ನು ನಿಯಂತ್ರಣದಲ್ಲಿರಿಸುವುದಾಗಿತ್ತು. ಈಗ ಅಂಥದೇ ತುರ್ತುಪರಿಸ್ಥಿತಿ ನಿರ್ಮಾಣವಾಗಿದೆ. ರಾಜ್ಯಶಕ್ತಿ ಬಹು ಕೇಂದ್ರಿತವಾಗಿದೆ. ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ. ಪ್ರಮುಖರಾಜಕೀಯ ಪಕ್ಷಗಳು ಧರ್ಮಾಂಧವಾಗುತ್ತಿವೆ. ಅಭಿವೃದ್ಧಿ ನೀತಿ ಪರಿಸರವಿನಾಶ ಮಾಡುತ್ತಿದೆ. ಶಿಕ್ಷಣ ನೀತಿ ಗೊಂದಲಮಯವಾಗಿದೆ. ಕೃಷಿ ಉದಾಸೀನಕ್ಕೆ ಒಳಗಾಗುತ್ತಿದೆ. ಕೇಂದ್ರೀಕೃತ ಕೈಗಾರಿಕೆಗಳು ಪ್ರಾಕೃತಿಕ ಸಂಪನ್ಮೂಲದ ಸಿಂಹಪಾಲನ್ನು ಕಬಳಿಸುತ್ತಿವೆ. ರಾಜಕೀಯ ಪಕ್ಷಗಳು ಜನತೆಯನ್ನು ಒಡೆದು ಆಳುವ ನೀತಿಯನ್ನು ಅನುಸರಿಸುತ್ತಿವೆ. ಚುನಾವಣೆಗಳು ಮತದಾರರಿಗೆ ಆಮಿಷಗಳನ್ನು ಒಡ್ಡುವ ಸಂದರ್ಭಗಳಾಗಿವೆ. ವಿಜ್ಞಾನ ಮತ್ತು ತಂತ್ರಜ್ಞಾನ ಮಾನವನ ಎಲ್ಲ ಸದ್ವಿಚಾರಗಳನ್ನು ಮತ್ತು ಸನಾತನ ಸತ್ಯಗಳನ್ನು ಸುಳ್ಳಾಗಿಸುತ್ತಿವೆ. ಮಹಿಳೆಯರು ಮತ್ತು ದಲಿತರ ಮೇಲೆ ದೌರ್ಜನ್ಯಗಳು ಅವ್ಯಾಹತವಾಗಿ ನಡೆಯುತ್ತಿವೆ. ಈ ಮುಂತಾದ ಅನೇಕ ಕಾರಣಗಳಿಂದಾಗಿ ಮುಖ್ಯವಾಗಿ ಭಾರತದೇಶ ಒಂದು ಬಗೆಯ ತುರ್ತುಪರಿಸ್ಥಿತಿಯ ಮೂಲಕ ಹೋಗುತ್ತಿದೆ.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ರಾಜಕಾರಣ ಹೊಸರೀತಿಯಲ್ಲಿ

ನಡೆಯಬೇಕೆಂದು ಗಾಂಧೀಜಿ ಬಯಸಿದ್ದರು. ಆದ್ದರಿಂದ ಗಾಂಧೀಜಿಯವರು ೧೯೪೮ರಲ್ಲಿ ಕಾಂಗ್ರೆಸ್ ಪಕ್ಷ ಲೋಕಸೇವಕ ಸಂಘವೆಂದು ಪರಿವರ್ತನೆಗೊಂಡು ಭಾರತ ಅಹಿಂಸಾತ್ಮಕ ಪ್ರಜಾಪ್ರಭುತ್ವವಾದಿ, ಸಮಾಜವಾದಿ ಸಮಾಜ ನಿರ್ಮಾಣಕ್ಕಾಗಿ ಅದನ್ನು ಪುನರ್ರಚಿಸಲು ಸೂಚಿಸಿದ್ದರು. ಆದರೆ ಕಾಂಗ್ರೆಸ್ ಪಕ್ಷ ಗಾಂಧೀಜಿ ಹೇಳಿದಂತೆ ತನ್ನನ್ನು ಹೊಸ ಸನ್ನಿವೇಶಕ್ಕೆ ಅನುಗುಣವಾಗಿ ಪರಿವರ್ತಿಸಿಕೊಳ್ಳದೆ ಪರಂಪರಾಗತ ರಾಜಕಾರಣವನ್ನೇ ಮುನ್ನಡೆಸಿದ್ದರಿಂದ ಇಂದು ಅದು ಅಪ್ರಸ್ತುತವಾಗುತ್ತಾ ಹಿನ್ನೆಲೆ ಸೇರುತ್ತಿದೆ. ಈ ಐತಿಹಾಸಿಕ ವಿಚಾರ ಬಂದ ೬೩ ವರ್ಷಗಳ ನಂತರ ಅದು ಆಮ್‌ಆದ್ಮಿ ಪಕ್ಷದ ಹೆಸರಿನಲ್ಲಿ ರೂಪತಳೆಯುತ್ತಿದೆ ಎಂದು ಗೋಚರಿಸುತ್ತಿದೆ. ಗಾಂಧೀಜಿಯವರ ಲೋಕಸೇವಕ ಸಂಘದ ವಿಚಾರವನ್ನು ಆಮ್‌ಆದ್ಮಿ ಪಕ್ಷ ಕೈಗೆತ್ತಿಕೊಂಡು ತನ್ನನ್ನು ಬದಲಾಯಿಸಿಕೊಳ್ಳುತ್ತಾ ಹೋದರೆ ಅದೊಂದು ಅದ್ಭುತ ಸಂಗತಿಯಾಗುತ್ತದೆ. ಅಧಿಕಾರಶಕ್ತಿಯ ಬದಲಾಗಿ ಲೋಕಶಕ್ತಿಯ ನಿರ್ಮಾಣವಾಗುತ್ತದೆ ಮತ್ತು ರಾಜನೀತಿಯ ಆಧ್ಯಾತ್ಮೀಕರಣದ ಅಧ್ಯಾಯ ಪ್ರಾರಂಭವಾಗುತ್ತದೆ. ೨೦೧೪ರ ಮೇ ತಿಂಗಳಲ್ಲಿ ನಡೆಯುವ ಚುನಾವಣೆಯನ್ನು ಎಲ್ಲರೂ ಒಂದು ಮಹಾಸಮರವೆಂದು ಭಾವಿಸುತ್ತಿದ್ದಾರೆ. ಕುರುಕ್ಷೇತ್ರದಂಥ ಯುದ್ಧಕ್ಕೂ ಅದನ್ನು ಹೋಲಿಸುತ್ತಿದ್ದಾರೆ. ಈ ಮಹಾಸಮರ ಭಾರತೀಯರ ರಾಜಕೀಯ ಪ್ರಬುದ್ಧತೆಯ ಅಗ್ನಿಪರೀಕ್ಷೆಯೂ ಆಗಲಿದೆ. ರಾಜಕೀಯ ಪಕ್ಷಗಳ ಸಿಂಧುತ್ವವನ್ನು ಒರೆಗಲ್ಲಿಗೆ ಹಚ್ಚಲಿದೆ. ೨೦೧೪ರ ಚುನಾವಣೆ ಎಂದಿನಂತೆ ಬಹುಮತದ ಆಧಾರದಿಂದ ಜನರ ಪರವಾಗಿ ಹೊಣೆಗಾರಿಕೆ ವಹಿಸಿಕೊಳ್ಳುವ ಅಧಿಕಾರರೂಢ ಪಕ್ಷ ಮತ್ತು ವಿರೋಧಪಕ್ಷ ಎಂದು ಈ ಮಹಾಚುನಾವಣೆಯಿಂದ ಹೊರಬರುವುದಾದರೆ ಯಾವ ಸಾಮಾಜಿಕ ಕ್ರಾಂತಿಯೂ ಸಾಧ್ಯವಾಗುವುದಿಲ್ಲ. ಆಮ್‌ಆದ್ಮಿ ಪಕ್ಷದಂಥ ಸಂಘಟನೆಗಳು ಇಟ್ಟುಕೊಂಡಿರುವ ಯಾವ ಧ್ಯೇಯಗಳೂ ಸಾಧಿತವಾಗುವುದಿಲ್ಲ ಆದ್ದರಿಂದ ಬದಲಾವಣೆ ತರುವ ಕೆಲಸ ಹೊಸರೀತಿಯಲ್ಲಿ ನಡೆಯಬೇಕು. ಅಧಿಕಾರ ನಡೆಸುವ ಪಕ್ಷ ಮತ್ತು ವಿರೋಧಿಪಕ್ಷ ಎಂಬ ಈ ಎರಡು ತೆರೆನಾದ ಪಕ್ಷಗಳ ಹೊರತಾಗಿ ಮೂರನೆಯ ನಿಷ್ಪಕ್ಷ ಸಮೂಹ ಒಂದಿರುಬೇಕು. ಆ ನಿಷ್ಪಕ್ಷ ಸಮೂಹ ಅಧಿಕಾರದಲ್ಲಿರುವ ಪಕ್ಷದ್ದೂ ಆಗಿರುವುದಿಲ್ಲ, ವಿರೋಧಿ ಪಕ್ಷದ್ದೂ ಆಗಿರುವುದಿಲ್ಲ. ವಿನೋಬಾ ಹೇಳುವಂತೆ ಅದೇ ಒಂದು ತಟಸ್ಥ ಸಮೂಹವಾಗಿರುವುದು. ಲೋಕಹಿತಸಾಧನೆಯೇ ಈ ಸಮೂಹದ ವೈಶಿಷ್ಟ್ಯ. ಈ ಸಮೂಹ ದೊಡ್ಡದಾದಷ್ಟೂ ಬಲಶಾಲಿಯಾದಷ್ಟೂ ಆಡಳಿತ ಮತ್ತು ಪ್ರಜಾತಂತ್ರ ಪರಿಶುದ್ಧವಾಗಿರುತ್ತವೆ. ಆ ಪಕ್ಷಗಳು ಮಿತಿತಪ್ಪದೆ ಇದ್ದಾವು. ಈ ಮೂರನೆಯ ನಿಷ್ಪಕ್ಷ ಸಮೂಹಕ್ಕೆ ದೇಶವ್ಯಾಪಿ ರಚನಾತ್ಮಕ ಕಾರ್ಯಕ್ರಮಗಳು ಇರುತ್ತವೆ. ಇಂಥ ನಿಷ್ಪಕ್ಷ ಸಮೂಹವಾಗುವ ಪ್ರಯತ್ನವನ್ನು ಆಮ್‌ಆದ್ಮಿ ಪಕ್ಷ ಮುಂದಿನ ಚುನಾವಣೆ ವೇಳೆಗೆ ಮಾಡಿಕೊಂಡಲ್ಲಿ ಅದು ಮತ್ತು ಅದರ ಪರವಾಗಿ ನಿಂತಿರುವ ಸಹಾನುಭೂತಿಯುಳ್ಳವರು ಬಯಸಿರುವ ಬದಲಾವಣೆಗಳನ್ನು ತರುವ ಸಾಧ್ಯತೆ ಇದೆ. ಇಲ್ಲವಾದರೆ ಇಲ್ಲ. ಪರಂಪರಾಗತ ರಾಜಕೀಯ ಬಿರುಗಾಳಿಯಲ್ಲಿ ಆಮ್‌ಆದ್ಮಿ

ಪಕ್ಷ ತರಗೆಲೆಯಂತೆ ಹಾರಿಹೋಗುವುದು. ಆಮ್‌ಆದ್ಮಿ ಪಕ್ಷಕ್ಕೆ ಇಂಥ ಒಂದು ದುರಂತ ಸಂಭವಿಸದಂತೆ ಮಾಡಲು ಮತ್ತು ಆಮ್‌ಆದ್ಮಿ ಅಂದರೆ ಜನಸಾಮಾನ್ಯರ ಹಿತಸಾಧಿಸುವ ಸಂಘಟನೆಯಾಗಿ ಪರಿವರ್ತನೆಗೊಳ್ಳಲು ಅರವಿಂದ ಕೇಜ್ರೀವಾಲ್ ಇಟ್ಟುಕೊಂಡಿರುವ ಆದರ್ಶಗಳು ಸ್ಥಿರವಾಗಿ ನಿಲ್ಲಬೇಕು. ಅದಕ್ಕಾಗಿ ಆಮ್‌ಆದ್ಮಿ ಪಕ್ಷ ಈಗ ದೆಹಲಿಯಲ್ಲಿ ಬಹುಮತದಿಂದ ಗೆದ್ದುಬಂದಿರುವುದರಿಂದ ಸರ್ಕಾರ ರಚಿಸುವ ಜವಾಬ್ದಾರಿಯಿಂದ ನುಣುಚಿಕೊಳ್ಳುವುದರ ಬದಲಾಗಿ ಅದರದೇ ಆದ ಸೈದ್ಧಾಂತಿಕ ಕಾರ್ಯಕ್ರಮಗಳಿಗೆ ಬೇಷರತ್ ಬೆಂಬಲ ಕೊಡುವ ಪಕ್ಷದ ಸಹಕಾರದೊಂದಿಗೆ ಸರ್ಕಾರ ರಚಿಸಬೇಕು ಒಂದು ವೇಳೆ ಅದು ಕಾರ್ಯಗತವಾಗದಿದ್ದರೆ ಮರುಚುನಾವಣೆ ನಡೆಯುಂತೆ ಮಾಡಿ ಆ ಚುನಾವಣೆಯಲ್ಲಿ ನಿಚ್ಚಳ ಬಹುಮತ ಪಡೆಯುವುದರ ಮೂಲಕ ನಿಶ್ಪಕ್ಷ ಸಮೂಹ ಹೊರಬರುವಂತೆ ಮಾಡಬೇಕು. ಮರುಚುನಾವಣೆ ನಡೆಯುವ ಸಂದರ್ಭ ಬಂದಲ್ಲಿ ಆಮ್‌ಆದ್ಮಿ ಪಕ್ಷ ತನ್ನನ್ನು ಗಾಂಧೀಜಿಯವರು ೧೯೪೮ರಲ್ಲಿ ಕಾಂಗ್ರೆಸ್ 'ಲೋಕಸೇವಕ ಸಂಘ' ಆಗಬೇಕೆಂದು ಕೊಟ್ಟ ಸಲಹೆಯಂತೆ ತಾನು ಲೋಕಸೇವಕ ಸಂಘವಾಗಿ ಪರಿವರ್ತನೆಗೊಂಡು ರಾಜ್ಯಶಕ್ತಿ, ದಂಡಶಕ್ತಿ ಮತ್ತು ದುರ್ಜನಶಕ್ತಿಗಳ ವಿರುದ್ಧ ಸಜ್ಜನಶಕ್ತಿಯಾಗ ರಾಜಕಾರಣ ಮತ್ತು ಸಾರ್ವಜನಿಕ ಜೀವನದ ಶುದ್ಧೀಕರಣಕ್ಕಾಗಿ ಪರಿವರ್ತಿಸುವುದಾಗಿ ಜನತೆಗೆ ಪ್ರಣಾಳಿಕೆ ಮೂಲಕ ಹೇಳಿ ಬಹುಮತದಿಂದ ಗೆದ್ದುಬರಬೇಕು. ಚುನಾವಣೆ ನಂತರ ಲೋಕಸೇವಕ ಸಂಘವಾಗಿ ರೂಪಗೊಳ್ಳಬೇಕು. ತನ್ಮೂಲಕ ಗಾಂಧೀ, ಜಯಪ್ರಕಾಶ ನಾರಾಯಣ, ವಿನೋಬಾ ಭಾವೆ, ಡಾ.ರಾಮಮನೋಹರ ಲೋಹಿಯಾ, ಡಾ॥ಅಂಬೇಡ್ಕರ್ ಮುಂತಾದವರು ಬಯಸಿದ್ದ ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಗಾಗಿ ಪ್ರಯತ್ನಿಸಬೇಕು. ರಾಜನೀತಿಯ ವಿಚಾರವನ್ನು ಬೇರೆರೀತಿಯಲ್ಲ ಮಾಡಬೇಕು. ವಿನೋಬಾಜಿ ಹೇಳುವಂತೆ ವಿಜ್ಞಾನ ನಮ್ಮನ್ನು ಪ್ರಬಲವಾದ ಜಗತ್ತಿನ ನಾಗರೀಕರನ್ನಾಗಿ ಮಾಡಿದೆ. ಇಡೀ ವಿಶ್ವ ಸಮೀಪಕ್ಕೆ ಬಂದಿದೆ. ಆದುದರಿಂದ ಕೆಲವೇ ದಿನ ಈ ಕುಸ್ತಿ ನಡೆದೀತು. ಆಮೇಲೆ ಆಲಿಂಗನವಾದೀತು. ವ್ಯಾಪಕ ವಿಶಾಲ ರಾಜನೀತಿಯೇ ಲೋಕನೀತಿ. ಒಬ್ಬರ ಮೇಲೆ ಮತ್ತೊಬ್ಬರ ಶಾಸನ ನಡೆಯಕೂಡದು. ವಿಶ್ವ ಮಾನವರನ್ನಾಗಿ ಮಾಡುವಂಥ ರಾಜನೀತಿಗೆ 'ರಾಜನೀತಿ' ಶಬ್ದ ಸರಿಹೋಗದು. ಇದನ್ನು 'ಲೋಕನೀತಿ' ಎನ್ನಬೇಕು. ಈ ಲೋಕನೀತಿಯು ಲೋಕಶಕ್ತಿಯಾಗಿ ಪರಿಣಮಿಸುವುದು. ಐತಿಹಾಸಿಕವಾಗಿ ಮಹತ್ತರವಾಗಬಹುದಾದ ಇಂಥ ಲೋಕಶಕ್ತಿ ಅಥವಾ ಸಜ್ಜನಶಕ್ತಿಯ ನಿರ್ಮಾಣದ ಕೆಲಸವನ್ನು ಸಧ್ಯದ ಆಮ್‌ಆದ್ಮಿ ಪಕ್ಷ ಮಾಡಲು ಮುಂದಾಗಬೇಕು. ಇದೇ ಒಂದು ದೊಡ್ಡ ರಾಜಕಾರಣ. ಇಂಥ ರಾಜಕಾರಣ ಮಾಡುವಲ್ಲಿ ಆಮ್‌ಆದ್ಮಿ ಪಕ್ಷಕ್ಕೆ ಮತ್ತು ಅದರ ನಾಯಕರಾದ ಅರವಿಂದ ಕೇಜ್ರೀವಾಲ್ ಮತ್ತು ಅವರ ಸ್ನೇಹಿತರಿಗೆ ಶಕ್ತಿ ಬರಲೆಂದು ಮತ್ತು ಈ ಕೆಲಸಕ್ಕೆ ಅಣ್ಣಾ ಹಜಾರೆಯವರು ಕೈಗೂಡಿಸಲೆಂದು ಬಯಸೋಣ.

* * *

ರಾಜ್ಯ ಸಂಸ್ಥೆಯ ಉದಯ

– ವಿನೋಬಾ

ನಮ್ಮ ಈ ಮಾನವ ಸಮಾಜ ಹಲವಾರು ಲಕ್ಷ ವರ್ಷಗಳಿಂದಿದೆಯೆಂದು ವಿಜ್ಞಾನಿಗಳು ಹೇಳುತ್ತಾರೆ. ಆದರೆ ಉಪಲಬ್ಧವಿರುವ ಇತಿಹಾಸವನ್ನು ಗಮನಕ್ಕೆ ತೆಗೆದುಕೊಂಡರೂ ಕೂಡ ೫-೧೦ ಸಾವಿರ ವರ್ಷಗಳಿಂದ ರಾಜ್ಯಸಂಸ್ಥೆಯ ವಿಕಾಸವಾಗುತ್ತಾಹೋದುದು ಕಂಡು ಬರುತ್ತದೆ. ಪ್ರಾಚೀನ ಕಾಲದಲ್ಲಿ ರಾಜ್ಯ ಸಂಸ್ಥೆ ಇರಲಿಲ್ಲ. ಆದರೆ ತರುವಾಯ ವ್ಯಕ್ತಿಗಳಲ್ಲಿಯ ಪರಸ್ಪರರ ಸಂಘರ್ಷವನ್ನು ಬಗೆಹರಿಸುವುದಕ್ಕಾಗಿ ಮತ್ತು ವ್ಯವಸ್ಥೆಯನ್ನು ಕಾಪಾಡುವುದಕ್ಕಾಗಿ ಮಾನವ ಸಮಾಜಕ್ಕೆ ರಾಜ್ಯ ಸಂಸ್ಥೆಯ ಅಗತ್ಯ ಅನಿಸಲಾರಂಭಿಸಿತು ಮತ್ತು ಇದಕ್ಕಾಗಿ ರಾಜ್ಯ ಸಂಸ್ಥೆ ಅಸ್ತಿತ್ವದಲ್ಲಿ ಬಂದಿತು. ಅದರಲ್ಲಿ ರಾಜ ಇರುತ್ತಿದ್ದ ಮತ್ತು ಅವನ ಸರ್ದಾರರು ಇರತ್ತಿದ್ದರು. ನಂತರ ಅವರು ಮಂತ್ರಿ ಇತ್ಯಾದಿ ಮಾಡಿಕೊಂಡರು. ಈ ಪ್ರಕಾರ ರಾಜ್ಯ ವ್ಯವಹಾರದ ವ್ಯವಸ್ಥೆ ಮಾಡಿದರು. ಒಟ್ಟು ಜಗತ್ತಿನಲ್ಲಿ ಜನರು ಒಂದು ರಾಜ್ಯ ಸಂಸ್ಥೆಯನ್ನು ರಚಿಸಿದರು. ಮೊದಲು ಅದು ಕೇವಲ ಒಬ್ಬ ವ್ಯಕ್ತಿಯ ಅರಸೊತ್ತಿಗೆಯಲ್ಲಿ ನಡೆಯಿತು. ಹಳೆಯ ಕಾಲದಲ್ಲಿ ವಿಭಿನ್ನ ದೇಶಗಳ ಮಧ್ಯೆ ಹೆಚ್ಚು ಸಂಪರ್ಕ ಇರಲಿಲ್ಲ. ಆದರೆ ಎಲ್ಲ ಸ್ಥಳಗಳಲ್ಲಿ ರಾಜರೇ ರಾಜ್ಯ ಮಾಡುತ್ತಿದ್ದರು. ಜಗತ್ತಿನ ಎಲ್ಲಾ ಜನರು ಒಟ್ಟಾಗಿ ಕೂತು ಆ ರಾಜರನ್ನು ಒಪ್ಪುತ್ತಿದ್ದರು ಎಂದೇನಲ್ಲ. ವಿಚಾರಗಳ ಕೊಂಚ ಆದಾನ-ಪ್ರದಾನ ಆಗುತ್ತಿದ್ದಿತು. ಅದರೂ ಕೂಡ ವಿಭಿನ್ನ ದೇಶಗಳಲ್ಲಿ ರಚಿತವಾದ ರಾಜ್ಯ ಸಂಸ್ಥೆಗಳು ಸ್ವತಂತ್ರ್ಯವಾಗಿಯೇ ಇದ್ದವು. ಅವು ಸ್ವಾಭಾವಿಕವಾಗಿ ಉಂಟಾದವು. ಜನರಿಗೆ ಒಳ್ಳೆಯ ರಾಜ್ಯ ವ್ಯವಹಾರ ನಡೆಸಲು ಯಾರಾದರೊಬ್ಬ ರಾಜನಿರಬೇಕೆಂದೇ ಹೊಳೆಯುತ್ತಿತ್ತು. ಹಳೆಯ ಕಥೆಯೊಂದಿದೆ. ಒಂದು ಸಲ ಕಪ್ಪೆಗಳಿಗೆ ರಾಜನಿರಬೇಕೆಂಬ ಇಚ್ಛೆಯಾಯಿತು. ರಾಜನಿಲ್ಲದೆ ತಮ್ಮ ವ್ಯವಸ್ಥೆ ಸರಿಹೋಗುವುದಿಲ್ಲವೆಂದು ಅವು ಯೋಚಿಸಿದವು. ಅವು ಭಗವಂತನಲ್ಲಿ ಈ ರೀತಿ ಪ್ರಾರ್ಥನೆ ಮಾಡಿದವು, "ಹೇ ಭಗವಂತನೇ! ನಮಗೆ ಯಾರಾದರೂ ರಾಜನನ್ನು ಕಳುಹಿಸಿಕೊಡು". ಭಗವಂತನು ಪ್ರಾರ್ಥನೆಯನ್ನು ಕೇಳಿಸಿಕೊಂಡ. ಮತ್ತು ಒಂದು ಎತ್ತನ್ನು ಕಳುಹಿಸಿದ. ಎತ್ತು ಕೆಳಗಿಳಿಯಿತು. ೫-೫೦ ಕಪ್ಪೆಗಳು ಅದರ ತುಳಿತಕ್ಕೆ ಸತ್ತು ಹೋದವು. ಅವು ಭಗವಂತನಿಗೆ ಹೇಳಿದವು, "ನಮಗೆ ಇಂಥ ರಾಜ ಬೇಕಿಲ್ಲ. ಬೇರೆ ಎರಡನೆಯ ರಾಜನನ್ನು ಕಳುಹಿಸಿಕೊಡಿ". ಭಗವಂತ ಒಂದು ದೊಡ್ಡ ಕಲ್ಲನ್ನು ಮೇಲಿಂದ ಎಸೆದ. ಅದರ ಕೆಳಗೆ ೨೦೦-೪೦೦ ಕಪ್ಪೆಗಳು ಅಸು ನೀಗಿದವು. ಅವು ಬಹು ಭಯಭೀತವಾದವು. ಅವು ಪುನಃ ಭಗವಂತನಿಗೆ ಹೇಳಿದುವು, "ನೀನು ದೊಡ್ಡ ಆಪತ್ತನ್ನು ನಮ್ಮ ಮೇಲೆ ಹಾಕಿದ್ದೀ". ಭಗವಂತ ಉತ್ತರಿಸಿದ, "ಯಾವ ಎತ್ತನ್ನು ಕಳುಹಿಸಿದ್ದೆನೊ ಅದು ನನ್ನ ವಾಹನ. ಆದರೆ ಅದರಿಂದ ನಿಮ್ಮ ಕೆಲಸವಾಗಲಿಲ್ಲ. ಆದ್ದರಿಂದ ನಾನು ಒಂದು ಸ್ಫಟಿಕ ಶಿಲೆಯನ್ನು ಕಳುಹಿಸಿದೆ. ಅದರ ಮೇಲೆ ನಾನು ಆಸನ ಹಾಕಿ ಕುಳಿತುಕೊಳ್ಳುತ್ತೇನೆ. ಅದು ಕೂಡ ನಿಮಗೆ ಒಳ್ಳೆಯದೆನಿಸಲಿಲ್ಲ. ಇನ್ನು ಎಂಥ ರಾಜನನ್ನು ಕಳುಹಿಸಲಿ? ಆದ್ದರಿಂದ

ರಾಜನಿಲ್ಲದೆಯೆ ನಿಮ್ಮ ಕೆಲಸ ಚೆನ್ನಾಗಿ ನಡೆಯುವುದು, ಇದನ್ನು ನೀವು ತಿಳಿದುಕೊಳ್ಳಿ". ಅಂದಿನಿಂದ ಕಪ್ಪೆಗಳು 'ರಾಜ'ನ ಹೆಸರನ್ನು ತೆಗೆದುಕೊಳ್ಳುವುದನ್ನು ಬಿಟ್ಟವು!

ಮನುಷ್ಯರದೂ ಕೂಡ ಇದೇ ಸ್ಥಿತಿ ಇದೆ. ಪ್ರತಿಯೊಂದು ಸ್ಥಳದಲ್ಲಿ ರಾಜನಿಗಾಗಿ ಬೇಡಿಕೆ ಬೆಳೆಯುತ್ತಾ ಹೋಯಿತು. ಮೊದಲಿನ ರಾಜರೇನಿದ್ದರೂ ಅವರು ಜವಾಬ್ದಾರಿಯಿಂದ ಇದ್ದರು. ಪುರಾಣಗಳಲ್ಲಿ ಮನು ಮಹಾರಾಜನ ಕಥೆ ಬರುತ್ತದೆ. ಮನು ಕಾಡಿನಲ್ಲಿ ತಪಸ್ಸು ಮಾಡುತ್ತಿದ್ದರು. ಅವರು ಮಹಾಜ್ಞಾನಿಯಾಗಿದ್ದರು. ತತ್ವಜ್ಞಾನದ ಚಿಂತನೆಯಲ್ಲಿ ತೊಡಗುತ್ತಿದ್ದರು. ಯಾವ ರಾಜರೂ ಇಲ್ಲದ್ದರಿಂದ ವ್ಯವಹಾರ ಚೆನ್ನಾಗಿ ನಡೆಯುತ್ತಿರಲಿಲ್ಲ. ಯಾರದರೂ ರಾಜನಿದ್ದರೆ ಒಳ್ಳೆಯದೆಂದು ಜನರ ಇಚ್ಛೆಯಾಯಿತು. ನಾವೆಲ್ಲರೂ ಮನು ಬಳಿ ಹೋಗೋಣ ಎಂದು ಆಲೋಚಿಸಿ ಅವರು ಮನು ಬಳಿ ಹೋದರು. ಮತ್ತು ಅವರಿಗೆ ಹೇಳಿದರು, "ಮಹಾರಾಜ, ನೀವು ನಮ್ಮ ರಾಜರಾದರೆ ನಮ್ಮ ಕೆಲಸ ನಡೆಯುವುದು. ಕೃಪೆ ಮಾಡಿ ನಮ್ಮ ರಾಜರಾಗಿರಿ." ಮನು ಮಹಾರಾಜ ಎರಡು ಷರತ್ತುಗಳನ್ನು ಇಟ್ಟರು. ಅವರು ಅಂದರು, "ನೀವೆಲ್ಲಾ ಜನರು ಏಕಮತದಿಂದ ಒಪ್ಪಿಕೊಳ್ಳಿ, ಆಗಲೇ ನಾನು ರಾಜನಾಗುವೆನು. ನಾನು ಬಹುಮತದಿಂದ ರಾಜನಾಗುವುದಿಲ್ಲ. ಎರಡನೆಯ ಷರತ್ತು ಏನೆಂದರೆ ರಾಜನಾಗುವುದರಿಂದ ಯಾವೆಲ್ಲ ಪಾಪಗಳಾಗುವವೊ ಅವುಗಳ ಜವಾಬ್ದಾರಿ ನಿಮ್ಮ ಮೇಲೆ ಇರುವುದು. ಏಕೆಂದರೆ *'ರಾಜ್ಯಾಂತೆ ನರಕ ಪ್ರಾಪ್ತಿಃ'* "ಯಾರು ರಾಜ್ಯವಾಳುತ್ತಾನೊ ಅವನು ನೇರವಾಗಿ ನರಕಕ್ಕೆ ಹೋಗುವನು. ಆದ್ದರಿಂದ ಪಾಪದ ಜವಾಬ್ದಾರಿಯನ್ನು ನೀವು ತೆಗೆದುಕೊಳ್ಳಿ, ಆಗ ಮಾತ್ರ ನಾನು ರಾಜನಾಗಲು ಒಪ್ಪುವೆನು. ಇಲ್ಲವಾದರೆ ಇಲ್ಲ". ಜನರು ಒಪ್ಪಿಕೊಂಡರು. ಮನು ರಾಜನಾದರು.

ಈ ರೀತಿ ಮನುರಾಜ ಉತ್ತಮ ರಾಜ್ಯ ನಡೆಸಿದರು. ಆದರೆ ಅವರ ನಂತರ ಯಾರು ಎಂಬ ಪ್ರಶ್ನೆ ಎದ್ದಿತು. ಎಂದಾದರೂ ಮನು ಸಾಯುವವರೇ ಇದ್ದರು. ಅವರ ನಂತರ ಅವರ ಮಗ ರಾಜನಾಗಲಿ ಎಂದು ತೀರ್ಮಾನವಾಯಿತು. ಅವರಲ್ಲಿ ಕೆಲವರು ಒಳ್ಳೆಯ ರಾಜರಾದರೆ ಕೆಲವರು ಕೆಟ್ಟ ರಾಜರಾದರು. ಅಕ್ಬರ್ ಆದ. ಔರಂಗಜೇಬನೂ ಆದ. ಜನರಿಗೆ ಸಿಹಿ ಮತ್ತು ಕಹಿ ಅನುಭವ ಬಹಳಷ್ಟಾಯಿತು. ಯಾವ ಸಮಯದಲ್ಲಿ ಎಂಥಾ ರಾಜ ಬರುವನು ಎಂಬ ಭರವಸೆ ಇಲ್ಲ. ಆದ್ದರಿಂದ ಜನರ ಹಣೆ ಬರಹವನ್ನು ಓರ್ವ ರಾಜನ ಕೈಗೆ ಒಪ್ಪಿಸುವುದು ತಪ್ಪೆಂದು ಯೋಚಿಸಿ ಜನರು ರಾಜರನ್ನು ಬಿಟ್ಟರು.

ಬಹಳ ಪ್ರಾಚೀನ ಕಾಲದಲ್ಲಿ ಸಂಗತಿಯೊಂದಿತ್ತು. ರಾಜರಿದ್ದರು. ಜನರು ಅವರನ್ನು ಆಯ್ಕೆ ಮಾಡುತ್ತಿದ್ದರು. ಆದರೆ ಋಷಿಗಳ ಸಲಹೆ ತೆಗೆದುಕೊಳ್ಳುತ್ತಿದ್ದರು. ಯಾವುದಾದರೂ ದೊಡ್ಡ ವಿಷಯ ಬಂದರೆ, ಪ್ರಶ್ನೆ ಉಂಟಾದರೆ ಋಷಿಗಳ ಬಳಿ ಹೋಗಿ ಅವರ ಸಲಹೆಯ ಮೇರೆಗೆ ರಾಜ್ಯ ನಡೆಸುತ್ತಿದ್ದರು. ಆಗ ಋಷಿಯ ರಾಜ್ಯವಿತ್ತಾದರೂ ಅವರು ಸಿಂಹಾಸನದ ಮೇಲೆ ಕುಳಿತುಕೊಳ್ಳುತ್ತಿರಲಿಲ್ಲ. ರಾಜ ಆಗಾಗ್ಗೆ ಅವರ ಬಳಿ ಹೋಗುತ್ತಿದ್ದ. ಆ ಋಷಿಗಳ ಆಯ್ಕೆ ಆಗುತ್ತಿರಲಿಲ್ಲ. ಅವರು ಇಂದ್ರಿಯ ನಿಗ್ರಹ ಮಾಡುತ್ತಿದ್ದರು. ಕಾಮ-ಕ್ರೋಧಾದಿಗಳನ್ನು ಗೆಲ್ಲುವ ಪ್ರಯತ್ನ ಮಾಡುತ್ತಿದ್ದರು. ಇಂಥ ಋಷಿಗಳ ಮಾತನ್ನು ರಾಜ ಒಪ್ಪುತ್ತಿದ್ದ ಮತ್ತು ಅವರ ಹೇಳಿಕೆ ಪ್ರಕಾರ ರಾಜ್ಯ ನಡೆಸುತ್ತಿದ್ದ.

ಋಷಿಯ ಬುದ್ಧಿವಂತಿಕೆಯ ರಾಜ್ಯ ಚೆನ್ನಾಗಿರುತ್ತದೆಂದು ಯಾವಾಗಲೂ ಹೇಳಲಾಗುತ್ತದೆ. ಆದರೆ ಋಷಿ ಎಂಬುವವರು ಯಾರು, ಅದನ್ನು ಹೇಗೆ

ಗುರುತಿಸುವುದು? ಆದ್ದರಿಂದ ಋಷಿಯ ರಾಜ್ಯ ಚೆನ್ನಾಗಿದ್ದರೂ ಕೂಡ ನಡೆಯಲಾರದು. ರಾಜನ ರಾಜ್ಯವಂತೂ ಕೆಟ್ಟದೆ.

ಯಾರೋ ಒಬ್ಬ ಬಲಶಾಲಿ ಬಂದ. ಶಸ್ತ್ರಾಸ್ತ್ರ ಒಟ್ಟು ಗೂಡಿಸಿದ. ಸೈನ್ಯ ರಚಿಸಿದ ಮತ್ತು ಲೂಟಿ ಮಾಡಲಾರಂಭಿಸಿದ. ಮೊದಲು ಮೊದಲು ಜನರು ಅವನನ್ನು ಡಾಕು ಎಂದೇ ತಿಳಿದರು. ಕೆಲ ದಿನಗಳ ನಂತರ ಅವನೇ ರಾಜನಾದ! ಅವನ ರಾಜ್ಯ ಪ್ರಾರಂಭವಾಯಿತು. ಹೀಗೆ ಶಸ್ತ್ರದ ಬಲದ ಮೇಲೆ ಜನರನ್ನು ಎದುರಿಸುವ ಮನುಷ್ಯ ರಾಜ್ಯ ಮಾಡಬಹುದಾಗಿದೆ. ರಾಜ್ಯ ಅವನೊಬ್ಬನದೇ ಆಗಿರುತ್ತದೆ.

ಜನರೇ ರಾಜನ ಅವಶ್ಯಕತೆಗಳನ್ನು ತಿಳಿದುಕೊಳ್ಳುತ್ತಿದ್ದರು. ಆಗ ರಾಜನ ಅನುಶಾಸನದಲ್ಲಿರುವುದು, ಅವನ ಆಜ್ಞೆಗಳನ್ನು ಪಾಲಿಸುವುದು ತಮ್ಮ ಧರ್ಮವೆಂದು ಜನರು ತಿಳಿದಿದ್ದರು. ಆದರೆ ಇಂದು ಸಮಾಜ ಬಾಲ್ಯಾವಸ್ಥೆಯಲ್ಲಿಲ್ಲ ಎಂಬುದನ್ನು ನೀವು ನೋಡುತ್ತೀರಿ.

ಸರ್ಕಾರದ ಸ್ವರೂಪ ಜನರ ಸ್ಥಿತಿಗತಿಯ ಮೇಲೆ ಅವಲಂಬಿಸಿದೆ. ಯಾವುದೇ ಒಂದು ಕುಟುಂಬದಲ್ಲಿ ಚಿಕ್ಕ ಚಿಕ್ಕ ಮಕ್ಕಳಿದ್ದಾರೆ ಎಂದೂ ಮತ್ತು ವಯಸ್ಕ ತಂದೆ ತಾಯಿಗಳೂ ಇದ್ದಾರೆ ಎಂದು ಭಾವಿಸಿ. ಅಲ್ಲಿ ತಂದೆ-ತಾಯಿಯರ ಆಜ್ಞೆಯೇ ನಡೆಯುತ್ತದೆ ಮತ್ತು ಚಿಕ್ಕ ಮಕ್ಕಳು ಅವರ ಆಜ್ಞಾಧಾರಿತರಾಗಿ ಇರಬೇಕಾಗುತ್ತದೆ. ಇದು ಕುಟುಂಬದ ಸ್ವರೂಪವಾಗುತ್ತದೆ. ಯಾವ ಕುಟುಂಬದಲ್ಲಿ ಮಕ್ಕಳು ಚಿಕ್ಕವರಿಲ್ಲವೊ, ತಿಳುವಳಿಕಸ್ಥರಾಗಿದ್ದಾರೊ ಮತ್ತು ತಂದೆ-ತಾಯಿಯರು ಪ್ರೌಢರಾಗಿ ಕೆಲಸಮಾಡುವಂಥವರಾಗಿದ್ದಾರೊ ಅಲ್ಲಿ ಇಬ್ಬರ ಸಹಯೋಗದಿಂದ ಕುಟುಂಬದ ಕೆಲಸನಡೆಯುವುದು. ಯಾವ ಕುಟುಂಬದಲ್ಲಿ ಮಕ್ಕಳು ಪ್ರೌಢರಾಗಿ ತಂದೆ-ತಾಯಿಯರು ವೃದ್ಧರಾಗಿದ್ದಾರೊ ಅಲ್ಲಿ ಮಕ್ಕಳದೇ ಎಲ್ಲ ವ್ಯವಹಾರ ನಡೆಯುವುದು. ತಂದೆ-ತಾಯಿಯರು ಕೇವಲ ಸಲಹೆಕೊಡುವರು. ಈ ರೀತಿ ಕುಟುಂಬದ ಸ್ವರೂಪ ಭಿನ್ನ ಭಿನ್ನ ಪ್ರಕಾರದ್ದಾಗಿರುವುದು. ಯಾವ ಸಮಾಜದಲ್ಲಿ ಪ್ರಜಾಕೋಟಿ ಪೂರ್ಣವಾಗಿ ಅಜ್ಞಾನಿಯಾಗಿರುತ್ತದೊ ವಿಚಾರಮಾಡುವ ಶಕ್ತಿ ಇರುವುದಿಲ್ಲವೊ ಆ ಸಮಾಜದ ಸರ್ಕಾರದ ಕೈಯಲ್ಲಿ ಹೆಚ್ಚು ಶಕ್ತಿ ಇರುವುದು ಮತ್ತು ಜನರು ಸರ್ಕಾರದಿಂದ ಸಂರಕ್ಷಣೆಯ ಅಪೇಕ್ಷೆ ಇಟ್ಟುಕೊಳ್ಳುವರು. ಪ್ರಜೆಗಳ ಶಕ್ತಿ, ಯೋಗ್ಯತೆ ಮತ್ತು ಜ್ಞಾನ ಬೆಳೆಯುತ್ತ ಹೋದಂತೆಲ್ಲ ಪ್ರಜೆಗಳಲ್ಲಿ ಪರಸ್ಪರ ಸಹಯೋಗದ ಭಾವನೆ ಬೆಳೆಯುವುದು. ಸರ್ಕಾರದ ಅಗತ್ಯ ಕಡಿಮೆಯಾಗುತ್ತಾ ಹೋಗುವುದು.

ಹಿಂದಿನ ಕಾಲದಲ್ಲಿ ರಾಜ್ಯ ಸಂಸ್ಥೆಯು ಕೇವಲ ಸಂಕಟವನ್ನು ದೂರ ಮಾಡುವುದಕ್ಕಾಗಿ ಮತ್ತು ಜಗಳ ಹೋಗಲಾಡಿಸುವುದಕ್ಕಾಗಿ ಸಹಾಯ ಮಾಡುತ್ತಿತ್ತು. ಅದೇ ಅದರ ಉದ್ದೇಶ್ಯವಾಗಿತ್ತು. ವ್ಯಾಪಾರಿಗಳು, ರೈತರು, ಶ್ರಮಜೀವಿಗಳು ತಮ್ಮ ತಮ್ಮ ಕೆಲಸವನ್ನು ಸ್ವಯಂಪ್ರೇರಣೆಯಿಂದ ಮಾಡುತ್ತಿದ್ದರು. ಸಮಾಜದ ಅಂಗ-ಪ್ರತ್ಯಂಗಗಳ ಪೂರ್ಣ ನಿಯಂತ್ರಣ ಸಾಧ್ಯವಿರಲಿಲ್ಲ. ಮತ್ತು ಅದರ ಇಚ್ಛೆಯೂ ಇರಲಿಲ್ಲ. ವ್ಯಕ್ತಿಸ್ವಾತಂತ್ರ್ಯ ಬಹಳಷ್ಟು ಪ್ರಮಾಣದಲ್ಲಿತ್ತು. ಧರ್ಮ ಸಂಸ್ಥೆಗಳು ಬೇರೆಯಿದ್ದವು. ಶಿಕ್ಷಣ ಕೊಡುವ ಗುರು ಮತ್ತು ಪಡೆಯುವ ವಿದ್ಯಾರ್ಥಿ ಸ್ವತಂತ್ರರಿದ್ದರು. ವ್ಯಾಪಾರ-ವ್ಯವಹಾರ ಸ್ವತಂತ್ರವಾಗಿತ್ತು. ಸಾರಂಶವೆಂದರೆ ಲೋಕಜೀವನ ಸ್ವತಂತ್ರವಾಗಿತ್ತು. ಸಂಕಟಬಂದಾಗಲೇ ಅದನ್ನೆದುರಿಸಲು ಸೇನೆಯನ್ನು ಎದರು ನಿಲ್ಲಿಸಲಾಗುತ್ತಿತ್ತು. ಇಡೀ ಇತಿಹಾಸದಲ್ಲಿ ಅದೇ ಆಗುತ್ತಲಿತ್ತು.

ಮುಂದೆ ಜನರು ಆಲೋಚಿಸಿ ರಾಜ್ಯದ ಅಧಿಕಾರ ವಂಶಪಾರಂಪರ್ಯವಾಗಿ

ನಡೆದರೆ ಗೊಂದಲ ಉಂಟಾಗುತ್ತೆಂದು ನಿಶ್ಚಯಿಸಿದರು. ಪ್ರಜೆಗಳ ಹಣೆಬರಹ ರಾಜನ ಮೇಲೆ ಅವಲಂಬಿಸಿರುವುದರಲ್ಲಿ ಅಪಾಯವಿದೆ ಎಂದು ಆಲೋಚಿಸಿ ಜನರು ಪ್ರತಿನಿಧಿಯನ್ನು ಆಯ್ಕೆ ಮಾಡುವ ವ್ಯವಸ್ಥೆ ಪ್ರಾರಂಭಿಸಿದರು. ಅದೇ ಇಂದು ನಮ್ಮ ದೇಶದಲ್ಲಿ ನಡೆಯುತ್ತಿದೆ.

ಎಲ್ಲ ವಿಷಯಗಳಲ್ಲಿ ಇಂದು ರಾಜ್ಯ ಸಂಸ್ಥೆಯ ನಿಯಂತ್ರಣವಿದೆ. ಮದುವೆ, ಪೇಟೆ, ವ್ಯಾಪಾರೋದ್ಯಮಗಳು, ದೇವಸ್ಥಾನ–ಮಸೀದಿ–ಮಠ, ಸಾಹಿತ್ಯ–ನಾಟಕ, ಸಂಗೀತ ಇವೆಲ್ಲವುಗಳ ಮೇಲೆ ಅದರ ನಿಯಂತ್ರಣವಿದೆ. ಎಲ್ಲವೂ ರಾಜ್ಯದ ಅಂಗವಾಗಿವೆ.

ಮೊದಲು ಸರ್ಕಾರದ ಕೈಯಲ್ಲಿ ಬಹಳ ಕಡಿಮೆ ಅಧಿಕಾರವಿತ್ತು. ಕೊನೆಗೆ ನೀವು ಯಾರಿಗೆ ಅಧಿಕಾರ ಕೊಟ್ಟಿರೊ ಅವರು ಮೆಲ್ಲ ಮೆಲ್ಲಗೆ ಇನ್ನೂ ಹೆಚ್ಚು ಅಧಿಕಾರ ಬೇಡಲಾರಂಭಿಸಿದರು. ಕಳ್ಳತನವಾದರೆ ಕಳ್ಳರನ್ನು ಹಿಡಿಯುವುದು, ಅದಕ್ಕಾಗಿ ಕಾನೂನು ಮಾಡುವುದು, ಜೈಲಿಗೆ ಕಳುಹಿಸುವುದು ಇತ್ಯಾದಿ ಅಧಿಕಾರವನ್ನು ಅವರಿಗೆ ಕೊಡಲಾಯಿತು. ನಾಗರೀಕ ಮತ್ತು ಸೈನ್ಯದೊಂದಿಗೆ ಇನ್ನೊಂದು ಶಾಸನ ನಡೆಯಿತು. ರಸ್ತೆಗಳನ್ನು ಮಾಡುವುದು, ಎಲ್ಲ ವ್ಯವಸ್ಥೆ ಮಾಡುವುದು, ಪ್ರಜಾಪಾಲನೆ ಮಾಡುವುದು ಇತ್ಯಾದಿ ಕೆಲಸಗಳನ್ನು ಸರ್ಕಾರದ ಕೈಗೆ ಒಪ್ಪಿಸಲಾಯಿತು. ಈಗಂತೂ ಎಲ್ಲ ಕೆಲಸವನ್ನೂ ಸರ್ಕಾರವೇ ಮಾಡುತ್ತಲಿದೆ.

ನಮ್ಮ ಈ ಮಾನವ ಸಮಾಜ ಯಾವತ್ತಿನಿಂದ ಅಸ್ತಿತ್ವದಲ್ಲಿದೆಯೋ ಅಂದಿನಿಂದ ಅದರಲ್ಲಿ ಪ್ರೇಮದೊಂದಿಗೆ ಜಗಳಗಳು ಕೂಡ ನಡೆಯುತ್ತಲಿವೆ. ಈ ಪ್ರಾಚೀನ ಕಾಲದಲ್ಲಿ ಯಾವುದನ್ನು ಮಾನವ ಸಮಾಜದ ಆರಂಭಕಾಲವೆಂದು ಪರಿಗಣಿಸಲಾಗುತ್ತದೆಯೋ ಆ ಕಾಲದಲ್ಲಿ ಸ್ವೈರ ಹಿಂಸಾಚಾರ ನಡೆಯುತ್ತಿತ್ತು. ಅವುಗಳ ನಿವಾರಣೆ ಅಥವಾ ಪ್ರತಿಶೋಧನೆಯನ್ನು ಅದೇ ಸ್ವೈರ ಹಿಂಸಾಚಾರದಿಂದ ಮಾಡಲಾಗುತ್ತಿತ್ತು. ಕೊನೆಗೆ ಸ್ವೈರ ಹಿಂಸೆಯ ಬದಲಿಗೆ ಸಂಘಟಿತ ಹಿಂಸೆಯನ್ನು ಮಾಡಿದರೆ ಆಗ ಸ್ವೈರ ಹಿಂಸೆ ನಿಲ್ಲುವುದು ಎಂಬ ಯುಕ್ತಿ ಸಮಾಜಕ್ಕೆ ಹೊಳೆಯಿತು. ಪರಿಣಾಮ ಸ್ವರೂಪವಾಗಿ ಯಾವುದನ್ನು ನಾವು ದಂಡಶಕ್ತಿ ಮತ್ತು ಶಾಸನವೆಂದು ಕೂಡ ಕರೆಯುತ್ತೇವೆಯೋ ಅದರ ಆರಂಭವಾಯಿತು. ವ್ಯವಸ್ಥಿತ ಹಿಂಸೆ ಅಂದರೆ ದಂಡಶಕ್ತಿ ಪ್ರಾರಂಭದಲ್ಲಿ ಸಮರ್ಥವೆಂದು ಸಿದ್ಧವಾಯಿತು. ಅದು ಸ್ವೈರ ಹಿಂಸೆಯನ್ನು ತಡೆಯಿತು. ಕೆಲಕಾಲ ಅದು ಸೀಮಿತ ರೂಪದಲ್ಲಿ ಇತ್ತು. ಹಾಗೂ ಲಾಭದಾಯಕವೆಂದು ಸಿದ್ಧವಾಯಿತು. ಆದ್ದರಿಂದ ಮನುಷ್ಯ ಅದನ್ನು ಧರ್ಮದ ಅಂಶವೆಂದು ಭಾವಿಸಿದ.

ದಂಡಂ ಧರ್ಮಂ ವಿದುರ್ ಬುಧಾಃ (ಮನು ೭.೪೧)– ಬುಧ ಜನರು ದಂಡವನ್ನು ಧರ್ಮವೆಂದು ತಿಳಿದರು ಎಂದು ಸ್ಮೃತಿಯಲ್ಲಿ ಹೇಳಿದೆ. ಆದರೆ ಈ ದಂಡಶಕ್ತಿಯಲ್ಲಿ ಪ್ರಾರಂಭದಲ್ಲಿ ವ್ಯವಸ್ಥಿತ ಮತ್ತು ಸೀಮಿತ ಹಿಂಸೆಯಿತ್ತು. ಕ್ರಮೇಣ ಸೀಮಿತವಾಗಿ ಉಳಿಯಲು ಸಾಧ್ಯವಾಗಲಿಲ್ಲ. ಮೆಲ್ಲ ಮೆಲ್ಲನೆ ಅದರ ಎಲ್ಲೆ ವಿಸ್ತೃತವಾಗುತ್ತಾ ಹೋಯಿತು. ಹರಡುತ್ತಾಹೋಯಿತು. ಆದಾಗ್ಯೂ ಅದು ವ್ಯವಸ್ಥಿತವಾಗಿಯೇ ಇತ್ತು. ಆದರೆ ವ್ಯವಸ್ಥಿತವಾಗಿ ಇದ್ದಿದ್ದರೆ ರಾಜ್ಯಭಾರ ಮಾಡಲಾಗುತ್ತಿರಲಿಲ್ಲ. ಮತ್ತು ಅದಕ್ಕೆ ದಂಡಶಕ್ತಿ ಎಂಬ ಹೆಸರು ಇರುತ್ತಿರಲಿಲ್ಲ. ಹೀಗೆ ಆಗುತ್ತಾ ಆಗುತ್ತಾ ಇಂದು ಅದೇ ಅತೀ ಹಿಂಸೆಯ ರೂಪ ಧಾರಣ ಮಾಡಿದೆ. ಆದ್ದರಿಂದ ಇಂದು ಮಾನವ ಸಮಾಜ ಭಯಭೀತವಾಗಿದೆ. ಇಂದು ಸಮಾಜ ಎಷ್ಟು ಭಯಭೀತವಾಗಿದೆಯೊ ಅಷ್ಟೊಂದು ಇತಿಹಾಸದಲ್ಲಿ ಎಂದೂ

ಆಗಿರಲಿಲ್ಲ.

ಭಯಭೀತವಾಗಿರುವ ಮಾನವ ಹಿಂಸೆಯ ಅನಿವಾರ್ಯತೆ ನಷ್ಟವಾಗಲೆಂದು ಬಯಸುತ್ತಾನೆ. ಯಾವ ರೀತಿ ಮಧ್ಯಯುಗದಲ್ಲಿ ಹಿಂಸೆ ದಂಡಶಕ್ತಿಯ ರೂಪದಲ್ಲಿ ಸೀಮಿತ ಮತ್ತು ವ್ಯವಸ್ಥಿತವಾಗಿತ್ತೊ ಅದೇ ರೀತಿ ಇರಬೇಕೆಂದು ಬಯಸುತ್ತಾನೆ. ಆದರೆ ಪ್ರಗತಿಯ ಚಕ್ರ ಎಂದೂ ಹಿಂದೆ ಬರಲಾರದು: ಮುಂದಕ್ಕೆ ಹೋಗುತ್ತದೆ. ಸಮೂಹಿಕವಾಗಿ ಮಾನವ ಮತ್ತು ಮಾನಸ ಯಂತ್ರದಂತಿಲ್ಲ. ಯಾರಾದರೂ ಮನುಷ್ಯ ಪ್ರಗತಿಚಕ್ರವನ್ನು ತಡೆದು ಅದನ್ನು ಹಿಂದಕ್ಕೆ ತೆಗೆದುಕೊಂಡು ಹೋಗಲು ಸಾಧ್ಯವಿಲ್ಲ. ಯಾವ ಗತಿಯಲ್ಲಿ ಅದು ಮುಂದುವರಿಯುತ್ತದೊ ಅದೇ ಗತಿಯಲ್ಲಿ ಅದು ಮುಂದುವರಿಸಬೇಕಿದೆ. ಈಗ ಅದು ತನ್ನ ರೂಪವನ್ನು ಅಹಿಂಸೆಯಲ್ಲಿ ವಿಸರ್ಜಿತಮಾಡಬೇಕು. ಅಥವಾ ಅದಕ್ಕಿಂತಲೂ ವಿಕರಾಳರೂಪವನ್ನು ಧಾರಣಮಾಡಿ ಮನುಷ್ಯಸಮಾಜವನ್ನು ಸಮಾಪ್ತಗೊಳಿಸಿ ಕೃತಕೃತ್ಯನಾಗಬೇಕು. ಒಂದು ವೇಳೆ ಸಮಾಜದ ಮೇಲೆ ಯಾವುದಾದರೂ ಅಧಿಕಾರ ನಡೆಯುವುದಾದರೆ ಅದು ಪೂರ್ಣ ಸಂಹಾರ ಮಾಡುವ ಅತಿ ಹಿಂಸೆಯದಾಗುವುದು. ಇಲ್ಲವೆ ಅದು ವಿಸರ್ಜಿತವಾಗಿ ಅ ಹಿಂಸೆಯಲ್ಲಿ ಪರಿವರ್ತಿತವಾಗುವುದು.

ಆದ್ದರಿಂದ ನಾವು ಇಂದು ಅತೀ ಹಿಂಸೆಯನ್ನು ಸಮಾಪ್ತಗೊಳಿಸಿ ಪೂರ್ಣ ಅಹಿಂಸೆಯ ಸಿದ್ಧತೆ ಮಾಡಿಕೊಳ್ಳಬೇಕು. ಬೇರೊಂದು ಮಾತಿನಲ್ಲಿ ಹೇಳುವುದಾದರೆ ದಂಡಮುಕ್ತ, ಶಾಸನಮುಕ್ತ ಸಮಾಜ ನಿರ್ಮಾಣಕ್ಕಾಗಿ ಸೊಂಟಕಟ್ಟಬೇಕು. ಆದರೆ ದಂಡಮುಕ್ತ ಸಮಾಜ, ಶಾಸನಮುಕ್ತ ಸಮಾಜದ ನಿರ್ಮಾಣಕ್ಕಾಗಿ ಬಹಳಷ್ಟು ಸಮಯ ಬೇಕಾಗುತ್ತೆಂದು ನನಗನಿಸುತ್ತಿತ್ತು. ಆದರೆ ಅತಿ ಹಿಂಸೆಯ ಸ್ವರೂಪ ಪ್ರಕಟವಾದಾಗಿನಿಂದ ದಂಡಮುಕ್ತ ಸಮಾಜ ಇನ್ನೂ ಬೇಗ ತರಬಹುದಾಗಿದೆ ಎಂದು ನನಗೆ ಆಸೆ ಉಂಟಾಗಿದೆ.

ಮೊದಲು ಜನರು ಕೈಯಲ್ಲಿ ಶಸ್ತ್ರ ಇಟ್ಟುಕೊಂಡೆ ನಿರ್ಣಯಮಾಡುತ್ತಿದ್ದರು. ನಂತರ ಮಾನವನ ವಿಕಾಸ ನಿಧಾನವಾಗಿ ಆಗುತ್ತಾ ಹೋದಂತೆ ಈರೀತಿ ಶಸ್ತ್ರ ಹಿಡಿದು ನಿರ್ಣಯ ಮಾಡುವ ರೀತಿಸರಿಯಿಲ್ಲವೆಂದು ಅನಿಸಿತು. ಆದ್ದರಿಂದ ಜನರು ಶಾಸನ ಸಂಸ್ಥೆಯಂಥ ಒಂದು ಸಂಸ್ಥೆ ಮಾಡಿ ಶಸ್ತ್ರವನ್ನು ಅದಕ್ಕೆ ಒಪ್ಪಿಸಿದರು. ಸಮಾಜ ಇನ್ನೂ ಮುಂದುವರೆದರೆ ಶಸ್ತ್ರಶಕ್ತಿಯ ಅಧಿಕಾರ ಶಾಸನ ಸಂಸ್ಥೆಗೂ ಕೂಡ ಇರಕೂಡದೆಂಬ ನಿರ್ಣಯಕ್ಕೆ ಬರುವನು. ತಮ್ಮ ರಕ್ಷಣೆಯ ಬೇರೊಂದು ಪ್ರಕಾರದ ಸಾಧನವನ್ನು ಕಂಡುಕೊಳ್ಳುವನು. ಶಸ್ತ್ರ ಕೇವಲ ಭಗವಂತನ ಕೈಯಲ್ಲಿ ಇರುವವು. ಮುಂದೆ ಎಂದೂ ಇದಕ್ಕಿಂತಲೂ ಸಮಾಜದ ವಿಕಾಸವಾಗುವುದೊ ಆಗ ಆ ದಂಡಶಕ್ತಿ ಭಗವಂತನ ಕೈಯಲ್ಲಿ ಕೂಡ ಇರುವುದಿಲ್ಲ. 'ಪರಮಾತ್ಮ ಕರುಣಾಮಯಿ, ಕ್ಷಮಾಶೀಲನಿದ್ದಾನೆ. ಕ್ಷಮೆ ಮತ್ತು ಕರುಣೆಯಿಂದ ಯಾವ ರೀತಿ ರಕ್ಷಣೆಯಾಗುತ್ತದೊ ಅಂಥದು ದಂಡದಿಂದ ಆಗಲಾರದು'. ಮಾನವ ಎಂದು ಈ ನಿರ್ಣಯ ಕೈಗೊಳ್ಳುತ್ತಾನೊ ಆಗಲೇ ಮಾನವ ಜಾತಿಯು ನಿಃಸ್ಸಂದೇಹವಾಗಿ ವಿಕಾಸವಾಗುವುದು.

* * *

ನ್ಯೂಕ್ಲಿಯರ್ ಯುದ್ಧದ ಭಯಾನಕ ದೃಶ್ಯ

– ಇರಾ ಹೆಲ್ಫಾಂಡ್

೨೦೦೮ ರಲ್ಲಿ ಬರಾಕ್ ಒಬಾಮಾ ಅಮೇರಿಕಾ ಸಂಯುಕ್ತ ಸಂಸ್ಥಾನದ ಅಧ್ಯಕ್ಷರಾಗಿ ಆಯ್ಕೆಯಾದರು ಮತ್ತು ಅದೇ ಹೊತ್ತಿಗೆ ಡಿಂಟ್ರಿ ಮೆಡ್‌ವೆಡೇವ್ ರಷಿಯಾದ ಅಧ್ಯಕ್ಷರಾಗಿ ಆಯ್ಕೆಯಾದರು. ಆಗ ಜಗತ್ತಿನಾದ್ಯಂತ ಇರುವ ವೈದ್ಯಕೀಯ ಸಮುದಾಯ ಬಹಿರಂಗ ಪತ್ರವೊಂದನ್ನು ಅವರಿಗೆ ಬರೆಯಿತು. ನ್ಯೂಕ್ಲಿಯರ್ ಶಸ್ತ್ರಾಸ್ತ್ರಗಳನ್ನು ರದ್ದು ಪಡಿಸುವ ಕಾರ್ಯಕ್ಕೆ ಗರಿಷ್ಠ ಆದ್ಯತೆಯನ್ನು ಕೊಡಬೇಕೆಂದು ಅದರಲ್ಲಿ ಒತ್ತಾಯಿಸಲಾಗಿತ್ತು.

"ಸದ್ಯದ ಘಳಿಗೆಯಲ್ಲಿ ನೀವು ಅನೇಕ ತುರ್ತು ಗಂಡಾಂತರಗಳನ್ನು ಎದುರಿಸುತ್ತಿರಬಹುದು. ಆದರೆ ಅಣ್ವಸ್ತ್ರಗಳ ರದ್ದುಪಡಿಸುವಿಕೆಯ ಅಗತ್ಯದ ಮುಂದೆ ಅವೆಲ್ಲವೂ ನೇಪಥ್ಯಕ್ಕೆ ಸರಿಯುತ್ತವೆ. ಸಾವಿರ ವರ್ಷಗಳ ಅನಂತರದಲ್ಲಿ ನೀವು ಮುಂದಿನ ಕೆಲವು ವರ್ಷಗಳಲ್ಲಿ ಏನು ಮಾಡುತ್ತೀರಿ ಎನ್ನುವುದನ್ನು ಯಾರೂ ನೆನೆಯುವುದಿಲ್ಲ. ಆದರೆ ಪರಮಾಣು ಅಸ್ತ್ರದ ಭೀತಿ ಇಲ್ಲದಂತೆ ಮಾಡಿದ ನಾಯಕರನ್ನು ಮಾತ್ರ ಎಂದೂ ಮರೆಯುವುದಿಲ್ಲ... ದಯಮಾಡಿ ನಮ್ಮ ಕೈ ಬಿಡಬೇಡಿ".

ಆರ್ಥಿಕ ಬಿಕ್ಕಟ್ಟಿನ ಅನಿವಾರ್ಯತೆಗಳು ಬೇರೆಲ್ಲ ಬಿಕ್ಕಟ್ಟುಗಳನ್ನು ಹೊರದೂಡುವವೆಂದು ನಾವು ನಂಬಿದ್ದೆವು. ಇದುವರೆಗೆ ರಷಿಯಾ ಮತ್ತು ಅಮೇರಿಕಾದ ನಾಯಕರು ನಮ್ಮ ಕೈ ಬಿಟ್ಟಿದ್ದಾರೆ. ಒಬಾಮಾರ ಪುನರಾಯ್ಕೆ ಜಗತ್ತನ್ನು ಪರಮಾಣು ಅಸ್ತ್ರಗಳ ನಿಷ್ಕ್ರಿಯಗೊಳಿಸುವ ದಾರಿಯಲ್ಲಿ ಕರೆದೊಯ್ಯಲು ಒಂದು ಹೊಸ ಅವಕಾಶವನ್ನು ಅವರಿಗೆ ಕೊಟ್ಟಿದೆ. ಈ ಸದವಕಾಶವನ್ನು ಹಾಳುಮಾಡಿಕೊಳ್ಳಕೂಡದು.

೨೦೦೮ರಿಂದ ಪರಮಾಣು ಅಸ್ತ್ರಗಳಿಂದ ಏನೆಲ್ಲಾ ಅಪಾಯಗಳಿವೆಯೋ ಅವುಗಳ ಬಗ್ಗೆ ಇನ್ನೂ ಹೆಚ್ಚು ತಿಳುವಳಿಕೆ ಬಂದಿದೆ. ಕಳೆದ ಹಲವಾರು ದಶಕಗಳಿಂದ ಅಮೇರಿಕಾ ಮತ್ತು ರಷಿಯಾ ಮಧ್ಯೆ ಮಹಾಯುದ್ಧ ನಡೆದರೆ ಇಡೀ ಜಗತ್ತಿನಾದ್ಯಂತ ಮಾನವೀಯ ಘೋರ ದುರಂತಗಳು ಉಂಟಾಗುತ್ತವೆಂದು ನಮಗೆ ಗೊತ್ತಿದೆ.

ದಕ್ಷಿಣ ಏಷಿಯಾದಲ್ಲಿ ಸಂಭವಿಸಬಹುದಾದ ಬಹು ಚಿಕ್ಕ ಪ್ರದೇಶದಲ್ಲಿಯ ಪರಮಾಣು ಅಸ್ತ್ರಯುದ್ಧ ಇಡೀ ಮಾನವ ಕುಲಕ್ಕೆ ಅಪಾಯವಾಗಬಲ್ಲದೆಂದು ನಮಗೆ ಈಗ ಗೊತ್ತಿದೆ. ಹೆಲನ್ ರೊ ಬೂಕ್, ಹೊವೆನ್ ಬ್ರೈನ್‌ಟುನ್ ಮತ್ತು ಅವರ ಸಹೋದ್ಯೋಗಿಗಳು ಭಾರತ ಮತ್ತು ಪಾಕಿಸ್ತಾನ ಮಧ್ಯೆ ಸಂಭವಿಸಬಹುದಾದ ಯುದ್ಧದ ದೃಶ್ಯ ಹೇಗಿರಬಹುದೆಂದು ಕಲ್ಪಿಸಿಕೊಂಡಿದ್ದಾರೆ. ಆ ಯುದ್ಧದಲ್ಲಿ ಎರಡೂ ದೇಶಗಳು ಹಿರೋಶಿಮಾದ ಮೇಲೆ ಬಿದ್ದ ಬಾಂಬಿನ ಗಾತ್ರದ ತಲಾ ಐವತ್ತು ಬಾಂಬ್‌ಗಳನ್ನು ಉಪಯೋಗಿಸಿದರೆ, ಅಂದರೆ ಜಗತ್ತಿನಲ್ಲಿರುವ ೨೫ಸಾವಿರ ಯುದ್ಧಾಸ್ತ್ರಗಳ ಶೇ/೦.೪ರಷ್ಟು ಬಾಂಬ್‌ಗಳನ್ನು ಉಪಯೋಗಿಸಿದರೆ ಆಗುವ

ಪರಿಣಾಮಗಳು ನಮ್ಮ ಊಹೆಗೂ ಮೀರಿದ್ದು.

ಆಸ್ಫೋಟನೆಗಳು, ಅಗ್ನಿ ಬಿರುಗಾಳಿಗಳು ಮತ್ತ ವಿಕಿರಣಗಳು ಇಪ್ಪತ್ತು ದಶಲಕ್ಷ ಜನರನ್ನು ಒಂದು ವಾರದಲ್ಲಿ ಸಾಯಿಸುವವು. ಜಗತ್ತಿನಾದ್ಯಂತ ಉಂಟಾಗುವ ಪರಿಣಾಮಗಳು ಇನ್ನೂ ಹೆಚ್ಚು ಭೀಕರಾಗಿರುವವು. ಅಗ್ನಿ ಬಿರುಗಾಳಿಗಳು ೫ದಶಲಕ್ಷ ಟನ್ನುಗಳಷ್ಟು ಕಾಡಿಗೆಯಂಥ ಪದಾರ್ಥವನ್ನು ವಾತಾವರಣಕ್ಕೆ ಸೇರಿಸುವವು. ಆ ಹೊಗೆ ಸೂರ್ಯನ ಬೆಳಕನ್ನು ತಡೆಯುವುದು. ಆಗ ಉಷ್ಣತೆ ಸರಾಸರಿ ೧೩ ಡಿಗ್ರಿ ಸೆಲ್ಸಿಯಸ್‌ನಷ್ಟು ಕಡಿಮೆಯಾಗುತ್ತದೆ. ಈ ಪರಿಸ್ಥಿತಿ ಒಂದು ದಶಕ ಕಾಲವಿರುತ್ತದೆ. ಕ್ಷಿಪ್ರವಾಗಿ ಉಷ್ಣತೆ ಕಡಿಮೆಯಾಗುವುದರಿಂದುಂಟಾಗುವ ದಟ್ಟಣೆ ಮತ್ತು ಬೆಳೆ ಬಳೆಯುವ ಋತುಮಾನ ಕಡಿಮೆಯಾಗುವುದರಿಂದ ಅಹೋರೋತ್ಪಾದನೆಯಲ್ಲಿ ಕೊರತೆಯುಂಟಾಗುವುದು.

ಓರ್ವ ಕೃಷಿ ವಿಜ್ಞಾನಿಯ ಪ್ರಕಾರ ಅಮೇರಿಕಾದ ಮುಸುಕಿನ ಜೋಳದ ಉತ್ಪಾದನೆ ಆ ದಶಕದಲ್ಲಿ ಶೇ.೧೭ರಷ್ಟು ಕಡಿಮೆಯಾಗುವುದು. ಅದೇ ರೀತಿ ಚೀನಾದಲ್ಲಿ ಭತ್ತದ ಉತ್ಪಾದನೆ ದಶಕ ಪೂರ್ತಾ ಶೇ.೧೫ರಷ್ಟು ಕಡಿಮೆಯಾಗುವುದು. ಇತ್ತೀಚಿಗಿನ ಪ್ರಾಥಮಿಕ ಅಧ್ಯಯನದ ಪ್ರಕಾರ ಬೇರೆಲ್ಲ ಬೆಳೆಗಳಲ್ಲಿಯ ಉತ್ಪಾದನೆ ಕೂಡ ಗಣನೀಯವಾಗಿ ಕಡಿಮೆಯಾಗುವುದು. ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ಉಂಟಾಗುವ ಆಹೋರೋತ್ಪಾದನೆಯ ಕೊರತೆಯನ್ನು ಎದುರಿಸಲು ಜಗತ್ತು ಸಿದ್ಧವಾಗಿರುವುದಿಲ್ಲ.

ಇತ್ತಿಚಿಗಿನ ಅಂಕಿ-ಸಂಖ್ಯೆಗಳ ಪ್ರಕಾರ ಜಗತ್ತಿನ ಜನಸಂಖ್ಯೆಯ ೮೭೦ ದಶಲಕ್ಷಕ್ಕೂ ಮಿಗಿಲಾಗಿ ಜನರು ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ.

ಇದಲ್ಲದೆ ೩೦೦ದಶಲಕ್ಷ ಜನರು ಆಹಾರವನ್ನು ರಫ್ತುಮಾಡುವ ದೇಶದಲ್ಲಿದ್ದಾರೆ. ಒಟ್ಟು ಒಂದು ಬಿಲಿಯನ್‌ನಷ್ಟು ಜನರು ಹಸಿವಿನಿಂದ ಬಳಲುವ ಅಪಾಯವನ್ನು ಎದುರಿಸುವರು. ಈ ಎಲ್ಲಾ ದುಷ್ಪರಿಣಾಗಳು ಸೀಮಿತ ಪ್ರದೇಶದಲ್ಲಿ ನಡೆಯಬಹುದಾದ ಪರಮಾಣು ಯುದ್ಧಗಳಿಂದ.

ಒಂದು ವೇಳೆ ಅಮೇರಿಕಾ ಮತ್ತು ರಷ್ಯಾ ಮಧ್ಯೆ ಯುದ್ಧವೇನಾದರೂ ಸಂಭವಿಸಿದಲ್ಲಿ ಪರಿಸ್ಥಿತಿ ಇನ್ನೂ ಭಯಂಕರವಾಗಿರುವುದು. ಕೋಟ್ಯಾಂತರ ಜನರು ಯುದ್ಧದ ಪರಿಣಾಮವಾಗಿ ಸತ್ತು ಹೋಗುವರು.

ಹವಾಮಾನದಲ್ಲಿ ಉಂಟಾಗುವ ಪರೋಕ್ಷ ಬದಲಾವಣೆಗಳ ಪರಿಣಾಮ ಇನ್ನೂ ಹೆಚ್ಚು ಭೀಕರವಾಗಿರುವುದು. ಜಾಗತಿಕ ತಾಪಮಾನ ಸರಾಸರಿ ೮ ಡಿಗ್ರಿ ಸೆಲ್ಸಿಯಸ್ಸ್‌ರಷ್ಟು ಕಡಿಮೆಯಾಗುವುದು. ೨೦ ಡಿಗ್ರಿ ಸೆಲ್ಸಿಯಸ್‌ಗಿಂತಲೂ ಕಡಿಮೆಯಾಗುವುದು. ಉತ್ತರ ಅಮೇರಿಕಾ ಮತ್ತು ಯುರೇಷಿಯಾದಲ್ಲಿ ಉತ್ತರ ಗೋಳಾರ್ಧದಲ್ಲಿ ಮೂರು ವರ್ಷಗಳ ಕಾಲ ಇಬ್ಬನಿ ಇರುವುದು. ಒಂದು ದಿನವೂ ಇಬ್ಬನಿರಹಿತವಾಗಿರುವುದಿಲ್ಲ. ಆಹಾರೋತ್ಪಾದನೆ ನಿಲುಗಡೆಗೆ ಬರುವುದು ಮತ್ತು ಮಾನವ ಜನಾಂಗದ ಬಹುದೊಡ್ಡ ಭಾಗ ಹಸಿವೆಯಿಂದ ಬಳಲುವುದು.

ಶೀತಯುದ್ಧ ಪ್ರಾರಂಭವಾದಾಗಿನಿಂದಲೂ ನಾವು ಈ ಪ್ರಕಾರದ ಯುದ್ಧ ಸಂಭವಿಸಲಾರದೆಂದೇ ನಟಿಸುತ್ತಾ ಬಂದಿದ್ದೇವೆ. ಆದರೆ ಅದು ಸಂಭವಿಸಬಹುದಾಗಿದೆ.

ಆ ಎರಡೂ ಅಣ್ವಸ್ತ್ರಗಳ ಮಹೋನ್ನತ ಶಕ್ತಿ ದೇಶಗಳು ಇಂದಿಗೂ ಕೂಡ ೨೦ಸಾವಿರ ಅಣ್ವಸ್ತ್ರಗಳನ್ನು ಹೊಂದಿವೆ. ಅವುಗಳಲ್ಲಿ ೨೦೦೦ಕ್ಕೂ ಹೆಚ್ಚಾಗಿ ಮಿಸ್ಸೈಲ್‌ಗಳ ರೂಪದಲ್ಲಿವೆ. ಈ ಮಿಸ್ಸೈಲ್‌ಗಳನ್ನು ಹದಿನೈದು ನಿಮಿಷಕ್ಕಿಂತಲೂ ಕಡಿಮೆ ಅವಧಿಯಲ್ಲಿ ಹಾರಿಸಬಹುದಾಗಿದೆ ಮತ್ತು ೩೦ನಿಮಿಷಗಳ ನಂತರ ತಮ್ಮ ಎದುರಾಳಿ ದೇಶಗಳ ನಗರಗಳನ್ನು ನಾಶಮಾಡಬಹುದಾಗಿದೆ.

ಎಲ್ಲಿಯವರೆಗೆ ಅಮೇರಿಕಾ ಮತ್ತು ರಷ್ಯಾ ಬಹುದೊಡ್ಡ ಪ್ರಮಾಣದಲ್ಲಿ ಯುದ್ಧ ಸಾಮಗ್ರಿಗಳನ್ನು ಇರಿಸಿರುತ್ತದೆಯೊ ಅಲ್ಲಿಯವರೆಗೆ ನಿಜವಾದ ಅಪಾಯ ಇದ್ದೇ ಇರುತ್ತದೆ. ಆ ಅಪಾಯ ಉದ್ದೇಶ ಪೂರ್ವಕವಾಗಿ ಇರಬಹುದು ಅಥವಾ ಅವಘಡದಿಂದ ಆಗಿರಬಹುದು. ೧೯೭೯ರಿಂದ ಈ ಬೃಹತ್ ದೇಶಗಳು ಪರಸ್ಪರ ಅಣ್ವಸ್ತ್ರಗಳನ್ನು ಉಪಯೋಗಿಸಲು ೭ಬಾರಿ ಸಿದ್ಧವಾಗಿದ್ದವು. ಅದಕ್ಕೆ ಕಾರಣ ತಮ್ಮ ದೇಶದ ಮೇಲೆ ಇನ್ನೊಂದು ದೇಶ ದಾಳಿ ಮಾಡುತ್ತಲಿದೆ ಎಂಬ ಭ್ರಮೆ. ಇಂಥ ತುಂಬ ಇತ್ತೀಚಿಗಿನ ಉದಾಹರಣೆ ೧೯೯೫ರ ಜನವರಿಯಲ್ಲಿ ಆಗಿತ್ತು. ಅಣ್ವಸ್ತ್ರ ಯುದ್ಧ ಪ್ರಾರಂಭವಾಗುವುದಕ್ಕೆ ಕೆಲವೇ ನಿಮಿಷಗಳಿದ್ದಂಥ ಕಾರಣಗಳು ಇಂದಿಗೂ ಬದಲಾಗಿಲ್ಲ. ಅಂಥದೇ ಪರಿಸ್ಥಿತಿ ಮುಂದುವರಿಯುತ್ತಿದೆ. ಇನ್ನುಮುಂದೆ ಅಂಥ ಘಟನೆ ಸಂಭವಿಸದಲ್ಲಿ ನಾವು ಅಷ್ಟೊಂದು ಅದೃಷ್ಟಶಾಲಿಯಾಗಿರಲು ಸಾಧ್ಯವಿಲ್ಲ. ಸಂಭವನೀಯ ಈ ಅಪಾಯವನ್ನು ಗಮನದಲ್ಲಿರಿಸಿಕೊಂಡು ೩೫ ರಾಷ್ಟ್ರಗಳು ಅಕ್ಟೋಬರ್ ತಿಂಗಳಲ್ಲಿ ಸಂಯುಕ್ತರಾಷ್ಟ್ರ ಸಂಘದಲ್ಲಿ ಒಟ್ಟುಗೂಡಿ ಎಲ್ಲ ಅಣ್ವಸ್ತ್ರಗಳನ್ನು ನಾಶಮಾಡಬೇಕೆಂದು ಕರೆಕೊಟ್ಟವು. ಅಂತರಾಷ್ಟ್ರೀಯ ರೆಡ್‌ಕ್ರಾಸ್ ಮತ್ತು ರೆಡ್‌ಕ್ರೆಸೆಂಟ್ ಮೂಮೆಂಟ್ ಕೂಡ ಅಣ್ವಸ್ತ್ರಗಳ ರದ್ದಿಗೆ ಕರೆಕೊಟ್ಟಿವೆ.

ಅಮೇರಿಕಾ ಮತ್ತು ರಷ್ಯಾ ಬೇರೆ ದೇಶಗಳ ಈ ಪ್ರಯತ್ನಕ್ಕೆ ಬೆಂಬಲ ಕೊಡಬೇಕು. ಮತ್ತು ತಪಾಸಣೆಯ ಮತ್ತು ಜಾರಿಗೊಳಿಸುವ ಒಪ್ಪಂದಕ್ಕೆ ಸಹಿಹಾಕಬೇಕು. ಇದು ಅಷ್ಟು ಸುಲಭವಲ್ಲ ಆದರೆ ಇದಕ್ಕೆ ಬೇರೆಯಾದ ಪರಿಹಾರ ಯೋಚಿಸಲು ಸಾಧ್ಯವಿಲ್ಲ. ಜಾಗತಿಕ ಸುರಕ್ಷತಾ ನೀತಿಯ ಆಧಾರದ ಮೇಲೆ ನಾವು ನಮ್ಮ ಅದೃಷ್ಟವನ್ನು ನೆಚ್ಚುವಂತಿಲ್ಲ. ನಾವು ಈ ಶಸ್ತ್ರಾಸ್ತ್ರಗಳನ್ನು ರದ್ದುಮಾಡದೆ ಹೋದರೆ ಯಾವುದೋ ಒಂದು ದಿನ ನಮ್ಮ ಅದೃಷ್ಟ ದುರದೃಷ್ಟವಾಗಿ ಆ ಶಸ್ತ್ರಾಸ್ತ್ರಗಳು ಉಪಯೋಗಿಸಲ್ಪಟ್ಟರೆ ನಾವು ಯಾವುದೆಲ್ಲವನ್ನು ಧಾರಣಮಾಡಿದ್ದೇವೆಯೊ ಅದೆಲ್ಲವೂ ನಾಶವಾಗುವುದು. ಇದಕ್ಕಿಂತ ದೊಡ್ಡ ಅಪಾಯ ಬೇರೊಂದಿರಲಾರದು.

(ಅನು : ಸುಕೌ; ಸಾಭಾರ : ಡೆಕ್ಕನ್ ಹೆರಾಲ್ಡ್)

* * *

ಇಪ್ಪತ್ತೊಂದನೇ ಶತಮಾನ ಮತ್ತು ಖಾದಿ

– ಸುರೇಂದ್ರ ಕೌಲಗಿ

೨೧ನೇ ಶತಮಾನ ವಿಜ್ಞಾನದ ಶತಮಾನ, ಅಂತರಿಕ್ಷಯಾನಗಳ ಶತಮಾನ ಮತ್ತು ಭೌತಿಕ ಅಭಿವೃದ್ಧಿಯ ಶತಮಾನ. ಶರವೇಗದಲ್ಲಿ ಸಾಗುತ್ತಿರುವ ವಿಜ್ಞಾನ ಮತ್ತು ಅಭಿವೃದ್ಧಿಯ ಈ ಶತಮಾನದಲ್ಲಿ ತೀರ ಭಿನ್ನ ತಾಂತ್ರಿಕತೆಯ ಸ್ವರೂಪ ಹಾಗೂ ವಿಭಿನ್ನ ಅರ್ಥಶಾಸ್ತ್ರದ ನೆಲೆಗಟ್ಟಿನ ಖಾದಿ ಹೇಗೆ ಪ್ರಸ್ತುತವಾಗಬಲ್ಲದು ಎಂಬ ಪ್ರಶ್ನೆ ಖಾದಿ ಪ್ರೇಮಿಗಳಲ್ಲೆರ ಮುಂದಿದೆ. ಖಾದಿಯನ್ನು ಇಂದಿನ ಜೀವನಪದ್ಧತಿಗೆ ಹೊಂದುವಂತೆ ಹೇಗೆ ಮಾರ್ಪಾಟುಮಾಡಬೇಕೆಂಬ ಪ್ರಶ್ನೆಯೂ ಇದೆ. ಈ ಪ್ರಶ್ನೆಗಳಿಗೆ ಉತ್ತರವನ್ನು ದೇಶದ ವಿಜ್ಞಾನಿಗಳೇ ಮತ್ತು ಅರ್ಥಶಾಸ್ತ್ರಜ್ಞರೇ ಕಂಡು ಹಿಡಿಯಬೇಕಿದೆ. ಖಾದಿಯ ಹಿಂದೆ ಇರುವ ವಿಚಾರ ಮತ್ತು ಅರ್ಥಶಾಸ್ತ್ರ ಧ್ರುವತಾರೆಯಂತೆ ಅಚಲವಾಗಿವೆ. ಧ್ರುವತಾರೆ ಹೇಗೆ ದಿಕ್ಸೂಚಿಯಾಗಿದೆಯೋ ಮತ್ತ ಹೇಗೆ ಅದು ನಿಶ್ಚಿತ ದಡಕ್ಕೆ ಪಯಣಿಗರನ್ನು ಸೇರಿಸುತ್ತದೆಯೋ ಹಾಗೆಯೇ ಆ ವಿಚಾರಗಳು ಇವೆ. ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಅಭಿವೃದ್ಧಿ ಮುಂತಾದವುಗಳೆಲ್ಲವೂ ಮಾನವ ಸಮಾಜದ ಹಿತಕ್ಕಾಗಿವೆಯೆಂದು ಪರಿಭಾವಿಸಲಾಗುತ್ತಿದೆ. ಅದೇ ರೀತಿ ಖಾದಿ ಮತ್ತು ಅದರ ಹಿಂದಿರುವ ಸಿದ್ಧಾಂತ ಕೂಡ ಮಾನವ ಸಮಾಜದ ಹಿತಕ್ಕಾಗಿಯೇ ಇದೆ. ಆದ್ದರಿಂದ ವಿಜ್ಞಾನ ಮತ್ತ ಖಾದಿ ಎರಡೂ ವಿರೋಧಾತ್ಮಕ ವಿಷಯಗಳೆಂದು ತಿಳಿಯದೆ ಅವುಗಳೆರಡರ ಅಂತರಂಗದಲ್ಲಿ ಒಂದುಗೂಡಿಸುವ ಅಂಶವಿದೆಯೆಂಬುದನ್ನು ಶೋಧಿಸುವ ಕೆಲಸವನ್ನು ಮಾಡಬೇಕಿದೆ. ಸ್ಥೂಲ ಸೃಷ್ಟಿಯ ಹೊಟ್ಟೆಯೊಳಗೆ ಸೂಕ್ಷ್ಮ ಜಗತ್ತೊಂದು ಇರುವಂತೆ ವಿಜ್ಞಾನ ಮತ್ತು ಖಾದಿಯ ಒಡಲೊಳಗೆ ಏಕತೆಯ ಸೂಕ್ಷ್ಮ ಜಗತ್ತೊಂದಿದೆ. ಆ ಜಗತ್ತಿನ ಅನ್ವೇಷಣೆಯಾಗಬೇಕಾದರೆ ವಿಜ್ಞಾನ ಮತ್ತು ಖಾದಿಯ ತತ್ವಜ್ಞಾನ ಎರಡರ ಸಮನ್ವಯವಾಗಬೇಕು. ಆಗ ವಿಜ್ಞಾನಕ್ಕೆ ಹೊಸದೃಷ್ಟಿ ಸಿಗುವಂತೆ ಖಾದಿಗೂ ಹೊಸದೃಷ್ಟಿ ಸಿಗುತ್ತದೆ. ಆನಂತರ ಖಾದಿ ಮತ್ತು ವಿಜ್ಞಾನಗಳೆರಡರ ಸಮನ್ವಯದಿಂದ ಹೊಸ ಜೀವನ ಪದ್ಧತಿ ಹಾಗು ಹೊಸ ಅರ್ಥವ್ಯವಸ್ಥೆ ರೂಪಗೊಂಡು ನವೀನ ಮಾನವ ಸಮಾಜ ನಿರ್ಮಾಣವಾಗುವುದು. ಹಳೆಯ ಮೌಲ್ಯಗಳು ಹೊಸ ಮೌಲ್ಯಗಳಿಗೆ ದಾರಿಮಾಡಿಕೊಡುವವು. ಗಾಂಧೀಜಿಯವರು ಬಯಸಿದ್ದ ಖಾದಿ ವಿಚಾರ ನಿಂತ ನೀರಾಗಿರಲಿಲ್ಲ, ಅದು ನಿತ್ಯ ಪ್ರವಹಿಸುವ ವಿಚಾರವಾಗಿತ್ತು.

ಚರಖಾದ ತಾಂತ್ರಿಕ ಸುಧಾರಣೆಗಾಗಿ ಪ್ರಯತ್ನಿಸುವವರಿಗೆ ಗಾಂಧೀಜಿ ಬಹುಮಾನವನ್ನು ಘೋಷಿಸಿದ್ದರು. ಈಗ ಭಾರತದ ಎಲ್ಲೆಡೆಯಲ್ಲಿ ನಡೆಯುತ್ತಿರುವ ಖಾದಿ ಪ್ರದರ್ಶನಗಳು ಹೊಸ ಯುವ ಪೀಳಿಗೆಯನ್ನು ಆಕರ್ಷಿಸಲು ಸಹಕಾರಿಯಾಗಿದೆ. ಒಂದು ಸಲ ಖಾದಿ ಉಡುಪನ್ನು ಧರಿಸಲು ಪ್ರಾರಂಭಿಸಿದರೆ ಕಾಲ ಕ್ರಮೇಣ ಅವರಿಗೆ ಖಾದಿ ಉದ್ಯಮದ ಹಿಂದೆ ಇರುವ ವಿಚಾರ, ಅರ್ಥನೀತಿ

ಮತ್ತು ಕೈಗಾರಿಕಾನೀತಿ ಇತ್ಯಾದಿ ಅರ್ಥವಾಗುತ್ತಾ ಹೋಗುವವು. ಕೊನೆಗೆ ಅವರು ಖಾದಿ ಉದ್ಯಮ ಉಳಿಯಲು ಮತ್ತು ಬೆಳೆಯಲು ಕೆಲಸಮಾಡುವಂಥ ಕೆಲಸಗಾರರಾಗುವರು. ಈಗಾಗಲೇ ಈ ಪ್ರಕಾರದ ಅನೇಕ ಯುವ ತಂಡಗಳು ದೇಶದಾದ್ಯಂತ ಕೆಲಸಮಾಡುತ್ತಿವೆ. ಇಂದು ಭಾರತ ಸರ್ಕಾರ ಅನುಸರಿಸುತ್ತಿರುವ ಆರ್ಥಿಕನೀತಿ, ಕೈಗಾರಿಕಾನೀತಿ ಮತ್ತು ಅಭಿವೃದ್ಧಿಯನೀತಿಗಳಲ್ಲಿ ಆಮೂಲಾಗ್ರ ಪರಿವರ್ತನೆ ಆಗಬೇಕೆಂದು ಹೊಳೆಯುತ್ತದೆ. ದೇಶದ ಯುವಕರಿಗೆ ಖಾದಿಯ ಮೂಲಕ ಇದರ ಅರಿವಾದರೆ ಅವರು ದೇಶದ ಮುಂದಿರುವ ಇಂದಿನ ಅನೇಕ ಸಾಮಾಜಿಕ, ಆರ್ಥಿಕ ಹಾಗೂ ರಾಜನೈತಿಕ ಸಮಸ್ಯೆಗಳನ್ನು ಪರಿಹರಿಸಬಹುದಾಗಿದೆ. ಇಂದಿನ ವಿಜ್ಞಾನ ಮತ್ತು ತಂತ್ರಜ್ಞಾನಗಳಿಗೆ ಗುರಿಯಿಲ್ಲ. ಕೇವಲ ಶೋಧನೆಗಾಗಿ ಶೋಧನೆ, ಯಂತ್ರಗಳ ಶೋಧನೆಗಾಗಿ ಯಂತ್ರಗಳು, ಹೀಗೆ ನಡೆಯುತ್ತಿದೆ. ಮನುಷ್ಯನ ಬುದ್ಧಿಶಕ್ತಿಯ ಸಾಮರ್ಥ್ಯವನ್ನು ಪೂರ್ಣರೂಪದಲ್ಲಿ ಬಳಸಿಕೊಳ್ಳಬೇಕೆಂಬ ಏಕೈಕ ಉದ್ದೇಶದಿಂದ ಅಂತರಿಕ್ಷಯಾನಗಳಂಥ ವೈಜ್ಞಾನಿಕ ಕಸರತ್ತುಗಳು ನಡೆಯುತ್ತಿವೆ. ಮಂಗಳ ಗ್ರಹಕ್ಕೆ ಹೋಗಲು ಜಗತ್ತಿನಾದ್ಯಂತ ಸುಮಾರು ೨ಲಕ್ಷ ಜನರು, ಭಾರತದಿಂದ ೨೦ಸಾವಿರ ಜನರು ಹೋಗಬಯಸಿ, ಅಮೇರಿಕಾದ ಖಾಸಗಿ ಕಂಪನಿಯೊಂದರಲ್ಲಿ ತಮ್ಮ ಹೆಸರನ್ನು ನೋಂದಾಯಿಸಿದ್ದಾರೆ. ಈ ರೀತಿಯ ಸಾಹಸ ಅಥವಾ ದುಃಸ್ಸಾಹಸ ಮಾನವ ಜನ್ಮ ಪಡೆದುದ್ದಕ್ಕೆ ಯಾವ ರೀತಿ ಸಾರ್ಥಕ್ಯವನ್ನು ಒದಗಿಸಬಲ್ಲದೆಂಬುದು ಗೊತ್ತಾಗುತ್ತಿಲ್ಲ. ೧೯೪೬ರಲ್ಲಿ ಅಮೇರಿಕಾದ ನ್ಯೂಯಾರ್ಕ್ ಪೋಸ್ಟ್ ಪತ್ರಿಕೆಯ ಪ್ರತಿನಿಧಿ ಪ್ರೀಮನ್ ಹೇಳಿದ್ದೇನೆಂದರೆ "ನಾನು ಈ ಚರಖಾವನ್ನು ಅಮೇರಿಕನ್ನರಿಗೆ 'ಆಲೋಚನಾ ಯಂತ್ರ' (Thinking Machine) ಎಂದು ಪರಿಚಯಿಸಿಕೊಡುತ್ತೇನೆ ಮತ್ತು ಅಮೇರಿಕನ್ನರು ನೂಲುವುದನ್ನು ಕಲಿತರೆ ಸ್ವಲ್ಪ ಚಿಂತನೆಯನ್ನು ಮಾಡಬಹುದು. ಇಲ್ಲವಾದರೆ ಅವರಿಗೆ ಸಮಯವೇ ಸಿಗುವುದಿಲ್ಲ."

ವಿಜ್ಞಾನ, ತಂತ್ರಜ್ಞಾನ ಮತ್ತು ಅಭಿವೃದ್ಧಿ ಬೆಳೆದಂತೆ ಮನುಷ್ಯನ ಮನಸ್ಸಿನಲ್ಲಿ ಮತ್ತು ಕುಟುಂಬಗಳಲ್ಲಿ ಶಾಂತಿಯಿಲ್ಲದಂತಾಗಿದೆ. ಜಾಗತಿಕವಾಗಿ ಹಿಂಸೆ ಎಲ್ಲಾ ಕಡೆಯೂ ತಾಂಡವವಾಡುತ್ತಿದೆ. ೧೯೨೧ ರಲ್ಲಿ ರಾಷ್ಟ್ರಬಾವುಟದಲ್ಲಿ ಚರಖಕ್ಕೆ ಸ್ಥಾನ ಸಿಕ್ಕಿತು. ಚರಖವೆಂದರೆ ಅಹಿಂಸೆ ಮತ್ತು ಸ್ವರಾಜ್ಯಕ್ಕೆ ದಾರಿ ಎಂಬ ಅರ್ಥವಿತ್ತು. ಆದರೆ ಭಾರತೀಯರು ಅಹಿಂಸೆಯನ್ನು ಮೈಗೂಡಿಸಿಕೊಳ್ಳದೆ ಇದ್ದುದ್ದರಿಂದ ಮತ್ತು ಅದರಲ್ಲಿ ನಂಬಿಕೆ ಇರಿಸಿಕೊಳ್ಳದೆ ಇದ್ದುದ್ದರಿಂದ ಚರಖಕ್ಕೆ ದೊರೆಯಬೇಕಾದ ಮಹತ್ವದ ಸ್ಥಾನ ದೊರೆಯಲಿಲ್ಲ. ಆದರೆ ವಿಜ್ಞಾನ ಮತ್ತು ತಂತ್ರಜ್ಞಾನದ ಕಾರಣದಿಂದ ಆಗುತ್ತಿರುವ ಅನೇಕ ದುರುಪಯೋಗಗಳ ಕಾರಣದಿಂದ ಇಂದಲ್ಲ ನಾಳೆ ಚರಖಕ್ಕೆ ಮತ್ತು ಖಾದಿಗೆ ಮರುಗೌರವ ಮತ್ತು ಮರುಮೌಲ್ಯ ಬರುವುದರಲ್ಲಿ ಸಂದೇಹವಿಲ್ಲ. ಆಧುನಿಕ ಶಿಕ್ಷಣ, ಯಾವುದೇ ದೇಶದಲ್ಲಿ ಆಗಿರಲಿ ಅದಕ್ಕೆ ದೈನಂದಿನ ಜೀವನದ ಜೊತೆಗೆ ಸಂಬಂಧವೇ ಇಲ್ಲ. ಆದ್ದರಿಂದ ನಮ್ಮ ಶರೀರದ ಬಗ್ಗೆಯೇ ತುಂಬಾ ಅಜ್ಞಾನಿಗಳಾಗಿದ್ದೇವೆ. ಅದೇ ರೀತಿ ನಮ್ಮ ಹಳ್ಳಿಯ ಬಗ್ಗೆ, ನಮ್ಮ ಹೊಲಗದ್ದೆಗಳ ಬಗ್ಗೆ ಸುತ್ತಲಿನ ಪ್ರಕೃತಿಬಗ್ಗೆ ಅಜ್ಞಾನಿಗಳಾಗಿದ್ದೇವೆ. ನಾವು ಮೊಟ್ಟ ಮೊದಲು ನಮ್ಮ ಶರೀರವನ್ನು, ನಮ್ಮ ಮನೆಯನ್ನು, ನಮ್ಮ ಹಳ್ಳಿಯನ್ನು ಅರಿತುಕೊಳ್ಳಬೇಕಾದುದು ಅಗತ್ಯ.

ಇವುಗಳನ್ನು ಅರಿತುಕೊಂಡಮೇಲೆ ಬೇರೆಲ್ಲವನ್ನು ಅರಿತುಕೊಳ್ಳುವುದರಲ್ಲಿ ಅರ್ಥವಿದೆ, ಇಲ್ಲವಾದರೆ ಇಲ್ಲ. ಖಾದಿ ಮತ್ತು ಚರಖ ನಮ್ಮನ್ನು ನಾವು ಅರ್ಥೈಸಿಕೊಳ್ಳಲು ಸಹಾಯಮಾಡುತ್ತವೆ. ಈ ೨೧ನೇ ಶತಮಾನದಲ್ಲಿ ಕೂಡ ಅದು ಸಾಧ್ಯವಿದೆ. ಗಾಂಧೀ ಚರಖವನ್ನು ಪತ್ತೆ ಹಚ್ಚಿದ್ದು ೨೦ನೇ ಶತಮಾನದಲ್ಲಿಯಾದರೂ ಅದು ಈ ೨೧ನೇ ಶತಮಾನದಲ್ಲಿಯೂ ತನ್ನ ಅರ್ಥವನ್ನು ಕಳೆದುಕೊಳ್ಳದೆ ಪ್ರಖರವಾಗಿ ಪ್ರಕಾಶಿಸುತ್ತಿದೆ. ಖಾದಿ ಗ್ರಾಮೋದ್ಯೋಗ ಪ್ರದರ್ಶನಗಳು ಒಂದು ಅರ್ಥದಲ್ಲಿ ವಿಜ್ಞಾನಿಗಳಿಗೆ ಮತ್ತು ತಂತ್ರಜ್ಞಾನಿಗಳಿಗೆ ಆಹ್ವಾನಕೊಡುವ ಕಾರ್ಯಕ್ರಮವಾಗಿದೆ ಎಂದು ಹೇಳಬಹುದಾಗಿದೆ.

ಹಿಂದಿನಕಾಲದಲ್ಲಿ ಸಂಚಾರ ಸಾಧನಗಳು, ಸಂಪರ್ಕಸಾಧನಗಳು ಇರಲಿಲ್ಲ. ವ್ಯವಸಾಯ ಕೂಡ ವರ್ಷವಿಡೀ ಇರಲಿಲ್ಲ. ಹಾಗಾಗಿ ಎಲ್ಲರ ಬಳಿ ಬಹಳ ಸಮಯವಿತ್ತು, ನಿರುದ್ಯೋಗವಿತ್ತು ಮತ್ತು ಬಡತನವಿತ್ತು. ಆಗ ಚರಖಾ ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸಿತ್ತು. ಇಂದು ಸಾಧನ ಸಂಪರ್ಕಗಳು ಹೆಚ್ಚಿದೆ, ಅವುಗಳ ವೇಗವೂ ಹೆಚ್ಚಿದೆ. ಮೊಬೈಲ್‌ನಂಥ ಸಂಪರ್ಕ ಸಾಧನಗಳು ಲಭ್ಯವಾಗಿವೆ. ಈ ಎಲ್ಲಾ ಕಾರಣದಿಂದ ಆಧುನಿಕ ಮಾನವನ ಸಮಯದ ಉಳಿತಾಯವಾಗುತ್ತಿದೆ. ಆದರೆ ಉಳಿತಾಯದ ಈ ಸಮಯವನ್ನು ಹೇಗೆ ಲಾಭಕರವಾಗಿಯೂ, ಉತ್ಪಾದಕವಾಗಿಯೂ, ಪ್ರಯೋಜನಕಾರಿಯಾಗಿಯೂ ಉಪಯೋಗಿಸಬೇಕೆಂಬುದು ಅವನಿಗೆ ಗೊತ್ತಾಗುತ್ತಿಲ್ಲ. ಜೀವನದ ಎಲ್ಲ ಕ್ಷೇತ್ರದಲ್ಲಿ ವೇಗವನ್ನು ಹೆಚ್ಚಿಸಿಕೊಳ್ಳಬೇಕೆಂಬುದೇ ಇಂದು ಎಲ್ಲರ ಅಭಿಲಾಷೆಯಾಗಿದೆ. ವೇಗದ ಈ ಅಭಿಲಾಷೆಯ ಹಿಂದೆ ಹಣ ಸಂಪಾದನೆಯ ಮಹತ್ವಾಕಾಂಕ್ಷೆಯಿದೆ. ಆದರೆ ಜೀವನದ ಗುರಿ ಆನಂದ, ಧನವಲ್ಲ. ಉಚಿತ ಮಾರ್ಗದಿಂದ ಸಂಪಾದಿಸಿದ ಧನ ಕೂಡ ಆನಂದದ ಸಾಧನವಾಗಬಲ್ಲದು. ಆದರೆ ಅಕರ್ಮಣ್ಯತೆ ಮತ್ತು ಲೂಟಿಮಾಡುವ ವೃತ್ತಿಯಿಂದ ಧನ ಸಂಪಾದಿಸುವುದು ಸಾಮಾಜಿಕ ಮತ್ತು ಆಧ್ಯಾತ್ಮಿಕ ಅಡಿಪಾಯವನ್ನೇ ಕಿತ್ತೆಸೆಯುತ್ತದೆ. ಈ ತರಹದ ಧನ, ಧನವಲ್ಲ. ಅದು ನಿಧನ. (ವಿನಾಶವೇ ಸರಿ) ಆದ್ದರಿಂದ ಖಾದಿ ಮತ್ತು ಚರಖಾ ಜೀವನದಲ್ಲಿ ಆನಂದವನ್ನು ತರುತ್ತವೆ. ತನ್ಮೂಲಕ ಮಾನವ ಜೀವನ ಈ ಭೂಲೋಕದಲ್ಲಿ ಆನಂದದಿಂದ ಕಳೆಯುವಂತೆ ಮಾಡುತ್ತದೆ. ವೇದಾಂತ, ವಿಜ್ಞಾನ ಮತ್ತು ವಿಶ್ವಾಸ ಈ ಮೂರು ಶಕ್ತಿಗಳನ್ನು ಅವು ನಮ್ಮದನ್ನಾಗಿಮಾಡಿಕೊಡುತ್ತವೆ. ಇದು ೨೧ನೇ ಶತಮಾನದ ಕರೆಯೂ ಆಗಿದೆ. ಹೀಗೆ ಖಾದಿ ಮತ್ತು ಗ್ರಾಮೋದ್ಯೋಗ ಪ್ರದರ್ಶನಗಳು ಮಹತ್ತಾದ ಸಾಧನೆಯನ್ನು ಸಾಧಿಸುತ್ತವೆ. ಆ ಪ್ರದರ್ಶನಗಳು ತಂತ್ರಜ್ಞಾನಿಗಳನ್ನು ಮತ್ತು ವಿಜ್ಞಾನಿಗಳನ್ನು ಜನಸಾಮಾನ್ಯರನ್ನು ಹಾಗೂ ಯುವಕರನ್ನು ಆಕರ್ಷಿಸುವಂತೆ ಏರ್ಪಡಲಿ. ಗಾಂಧೀಯವರ ಸರ್ವೋದಯ ಸಮಾಜದ ಕನಸು ನನಸಾಗಲಿ.

* * *

ಬೇಸಾಯದ ಮಹತ್ವ

- ಕುವೆಂಪು

ದಕ್ಷಿಣ ವಲಯದ ನಾಲ್ಕು ರಾಜ್ಯಗಳ ವಿವಿಧೋದ್ದೇಶ ಶಾಲೆಗಳಿಂದ ಬಂದಿರುವ ಕೃಷಿ ಅಧ್ಯಾಪಕರ ಸಂಪರ್ಕ ಹೊಂದುವುದೇ ಸಂತೋಷದಾಯಕವಾದ ಸಂದರ್ಭವೆಂದುಕೊಂಡಿದ್ದೇನೆ. ಈ ಒಂದು ತಿಂಗಳ ಅವಧಿಯ ವಿಚಾರಗೋಷ್ಠಿಗಳಲ್ಲಿ ವ್ಯವಸಾಯಕ್ಕೆ ಸಂಬಂಧಿಸಿದ ಅನೇಕ ಸಮಸ್ಯೆಗಳನ್ನು ಕುರಿತು ಚರ್ಚಿಸಿ, ಉಪಯುಕ್ತ ನಿರ್ಣಯಗಳನ್ನು ಸಾಧಿಸಿದ್ದೀರೆಂದು ನಂಬಿದ್ದೇನೆ.

ನಾನು ಕೃಷಿ ವಿಜ್ಞಾನ ಪಂಡಿತನಲ್ಲವಾದ್ದರಿಂದ ಅಧಿಕಾರಯುತವಾಗಿ ಮಾತಾಡಲಾರೆ. ಬೇಸಾಯ ಒಂದು ಗೌರವಯುತವಾದ ವೃತ್ತಿ ಎಂಬ ನಂಬಿಕೆಯುಳ್ಳವನಾದ್ದರಿಂದ,ಉಪಾಧ್ಯಾಯನಾಗಿ ಶಿಕ್ಷಣ ಅರ್ಥಪೂರ್ಣವಾಗತಕ್ಕದ್ದೆಂದು ತಿಳಿದಿರುವುದರಿಂದ ಒಂದೆರಡು ಮಾತು ಹೇಳಬಯಸುತ್ತೇನೆ.

ಮಾನವನ ಇತಿಹಾಸದಲ್ಲಿ ಬೇಸಾಯದ ಪ್ರಾರಂಭ ಮಹತ್ವಪೂರ್ಣವಾದ ಘಟ್ಟವೆಂದೂ, ಅದರ ತಾಂತ್ರಿಕತೆಯ ಮತ್ತು ವಿಧಾನಗಳ ವಿಕಾಸದ ಅಧ್ಯಯನ ರೋಮಾಂಚನಕಾರಿಯಾದದ್ದೆಂದೂ, ಕೆಲವು ದಿನಗಳ ಹಿಂದೆ ನಮ್ಮ ಪ್ರತಿನಿಧಿಗಳು ನುಡಿದರು. ಅದು ಪ್ರತಿಷ್ಠೆಯ ವೃತ್ತಿಯಲ್ಲ, ತೀರ ಕನಿಷ್ಠವಾದದ್ದು, ನೀರಸವಾದದ್ದು ಎಂದು ತಿಳಿಯದ ಜನ ಹೇಳಬಹುದು. ನಿಮ್ಮ ಕಲ್ಪನಾಪಕ್ಷಿಗತ ಇತಿಹಾಸದ ಕಡೆಗೆ ಹಾರಿದ್ದಾದರೆ ಅದೆಂಥ ಜೀವಾತುವಾದ, ಅದ್ಭುತರಮ್ಯವಾದ ವೃತ್ತಿಯೆಂಬುದು ಗೊತ್ತಾಗುತ್ತದೆ. ಹಸಿಮಾಂಸವನ್ನು ತಿನ್ನುತ್ತಾ, ಮೃಗಗಳೊಡನೆ ಮೃಗವಾಗಿರುತ್ತಿದ್ದ ಗುಹಾ ಮಾನವ ಬೇಸಾಯ ಕಂಡುಹಿಡಿದಾಗಿನಿಂದ ನಾಗರೀಕತೆಗೆ ನಾಂದಿ ಹಾಡಿದ. ಬೇಸಾಯದಿಂದ ಅವನು ಸ್ವಾವಲಂಬಿಯಾದ; ಅಷ್ಟೇ ಅಲ್ಲ, ಅವನ ಸಾಂಘಿಕ ಜೀವನ ಅನಿವಾರ್ಯವಾಯಿತು. ಅತಿಯಾದ ಕೈಗಾರಿಕೀಕರಣದಿಂದ ಅವನಿಂದು ಪ್ರಕೃತಿ ಹಾಗೂ ಭೂಮಾತೆಯ ಸಂಬಂಧದಿಂದ ವಂಚಿತನಾಗುತ್ತಿದ್ದಾನೆ. ಮಾನವನ ಪುನರುತ್ಥಾನಕ್ಕೆ ಪ್ರಾಚೀನ ಕೃಷಿಕ ಸಮಾಜವೊಂದೇ ದಿಕ್ಕಾಗಬೇಕೆಂದು ಕವಿಗಳು, ದಾರ್ಶನಿಕರು ಅಂತೆಯೇ ರಾಜಕೀಯ ನಾಯಕರು ಹೇಳುತ್ತಿದ್ದಾರೆ. ಆ ಸಮಾಜವನ್ನು ಪುನಃಸ್ಥಾಪಿಸುವ ಯೋಚನೆ ಭ್ರಮಾತ್ಮಕವಾದುದಾಗುತ್ತದೆ. ಈಗ ನಾವಿರುವ ಸಮಾಜ ಬಹು ಸಂಕೀರ್ಣವಾದುದು; ಅದರೊಡನೆ ಕೃಷಿ ಸಮಾಜವನ್ನು ಬೆಸೆಯುವ ಜಾಣ್ಮೆಯನ್ನು ಸಂಪಾದಿಸಿಕೊಳ್ಳಬೇಕಾಗಿದೆ. ಅಮೇರಿಕಾ ಮತ್ತು ಇಂಗ್ಲೆಂಡುಗಳಂತೆ ವ್ಯವಸಾಯ ಲಾಭದಾಯಕವಾದ ಹಾಗೂ ಗೌರವಯುತವಾದ ವೃತ್ತಿಯಾಗಬೇಕಾಗಿದೆ. ಕೃಷಿ ಅಧ್ಯಾಪಕರು ಯುವಕರಲ್ಲಿ ಅಂಥ ಭಾವನೆಯನ್ನು ಬೆಳೆಸಬೇಕಾಗಿದೆ. ಅವರು ನೂತನ ಪರಿಸ್ಥಿತಿಯನ್ನು ಸರಿಯಾಗಿ ಅರ್ಥಮಾಡಿಕೊಂಡು, ಹಿಂದಿನ ಪೀಳಿಗೆಯಲ್ಲಿ ಕಾಣಲಾಗದಿದ್ದ ಮೌಲ್ಯಪ್ರಜ್ಞೆಯನ್ನು ಕೊನರಿಸಿಕೊಳ್ಳಬೇಕಾಗಿದೆ.

ನಾವೀಗ ಬಹುಬೇಗದ ಸಂಚಾರ ಸೌಲಭ್ಯಗಳನ್ನು ಪಡೆದಿದ್ದೇವೆ.

ಶ್ರಮವನ್ನುಳಿಸುವಂಥ ಯಂತ್ರಗಳನ್ನು ಜೋಡಿಸಿಕೊಂಡಿದ್ದೇವೆ. ಉಕ್ಕು ಕಬ್ಬಿಣ ಮತ್ತು ಬಟ್ಟೆಗಳನ್ನು ತಯಾರಿಸಲು ದೊಡ್ಡ ದೊಡ್ಡ ಫ್ಯಾಕ್ಟರಿಗಳನ್ನು ಕಟ್ಟಿಕೊಂಡಿದ್ದೇವೆ. ಇದರಿಂದಾಗಿ ನಾವು ನಮ್ಮ ಪೂರ್ವಜರಿಗಿಂತ ಉತ್ತಮ ನಾಗರೀಕರೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ. ಫ್ಯಾಕ್ಟರಿಗಳ ನಿರ್ಮಾಣಕ್ಕಾಗಿ ಮತ್ತು ರಸ್ತೆ ಸೇತುವೆಗಳ ರಚನೆಗಾಗಿ ವಿದೇಶಗಳಿಂದ ಹಣವನ್ನು ಸಾಲವಾಗಿ ಪಡೆಯುತ್ತಿದ್ದೇವೆ. ನಾವು ಗುರಿಮುಟ್ಟಲು ಪಡೆಯಬೇಕಾಗಿರುವ ಸಾಧನಗಳಷ್ಟೇ ಇವು. ಆದರೆ ನಮ್ಮ ಜನರಿಗೆ ಹೊಟ್ಟೆ ತುಂಬ ಅನ್ನ ಮೈತುಂಬ ಬಟ್ಟೆ ಒದಗಿಸಬೇಕಾದರೆ ಅವರು ಸುಖವಾಗಿರಬೇಕಾದರೆ ಉತ್ಪನ್ನ ಅಧಿಕಗೊಳ್ಳಬೇಕೆನ್ನುವುದನ್ನು ಮರೆಯಬಾರದು. ಹೆಚ್ಚು ಬೆಳೆ ತೆಗೆಯಲನುವಾಗುವಂಥ ಕ್ರಮಗಳನ್ನು ಅನುಷ್ಠಾನಕ್ಕೆ ತಂದು, ಆಹಾರ ಸಮಸ್ಯೆಯನ್ನು ಬಗೆಹರಿಸದಿದ್ದಲ್ಲಿ ನಮ್ಮ ಯೋಜನೆಗಳೆಲ್ಲಾ ನಿರರ್ಥಕವಾಗುತ್ತವೆ. ಹಿಂದೆ ಒಂದು ಗಿಡ ಬೆಳೆಯುವಲ್ಲಿ ಈಗ ಎರಡು ಗಿಡ ಬೆಳೆಯುವ ವ್ಯಕ್ತಿಯೇ ನಿಜವಾದ ದೇಶಾಭಿಮಾನಿಯೆಂದೂ, ಅವನು ಮನುಕುಲದ ಸಂರಕ್ಷಕನೆಂದೂ, ನಾಡಿನ ರಾಜಕೀಯ ನಾಯಕರಿಗಿಂತ ಮತ್ತು ವಿಜ್ಞಾನಿಗಳಿಗಿಂತ ಶ್ರೇಷ್ಠನಾದವನೆಂದೂ ತಿಳಿಯಬೇಕಾಗುತ್ತದೆ. ನಾವು ಕೈಗಾರಿಕೆಗಳನ್ನು ಬೆಳಸಲಾಗದಿದ್ದರೆ ಹಿಂದುಳಿದ ರಾಷ್ಟ್ರದವರೆಂಬ ಅಭಿದಾನಕ್ಕೆ ಪಾತ್ರರಾಗುತ್ತೇವೆ. ಆದರೆ ವ್ಯವಸಾಯವನ್ನು ನಿರ್ಲಕ್ಷಿಸಿ ಆಹಾರೋತ್ಪತ್ತಿ ಕನಿಷ್ಠ ಪ್ರಮಾಣಕ್ಕಿಳಿದು, ಭಿಕ್ಷಾಪಾತ್ರೆ ಹಿಡಿದು ಇತರ ರಾಷ್ಟ್ರಗಳ ಮುಂದೆ ಅಂಗಲಾಚುವ ಪರಿಸ್ಥಿತಿಯೊದಗಿದ್ದಾದರೆ, ನಾವು ಆತ್ಮಗೌರವವುಳ್ಳ ರಾಷ್ಟ್ರವಾಗಿ ಬಾಳಲಾರೆವು. ನಾವು ಹಿಂದುಳಿದವರೆಂದು ಯಾರು ಬೇಕಾದರೂ ಹೇಳಲಿ; ಆದರೆ ಆತ್ಮಗೌರವವಿಲ್ಲದವರೆಂಬ ಅಪಪ್ರಥೆಗೆ ಗುರಿಯಾಗಬಾರದು. ಆದ್ದರಿಂದಲೇ ಗೋಲ್ಡ್‌ಸ್ಮಿತ್ ಹಳ್ಳಿಗಳನ್ನು ಹಾಳುಮಾಡಿದ ಕೈಗಾರಿಕಾ ಕ್ರಾಂತಿಯನ್ನು ಸಂಕಟದಿಂದ ದೂರಿದ್ದು.

Princess and lords may florish or may fade
A breath can make them, as a breath has made
But a bold peasantry, their country's pride
When once destroyed can never be supplied

ಕೈಗಾರಿಕೆಯಲ್ಲಿ ತುಂಬ ಮುಂದುವರಿದಿರುವ ಜಗತ್ತಿನ ರಾಷ್ಟ್ರಗಳು ವ್ಯವಸಾಯದ ಪ್ರಾಮುಖ್ಯವನ್ನರಿತುಕೊಂಡು, ಆರ್ಥಿಕ ವ್ಯವಸ್ಥೆಯಲ್ಲಿ ಸಮತೋಲನವನ್ನು ಸಾಧಿಸಲು ಪ್ರಯತ್ನಿಸುತ್ತಿವೆ. ಅಮೇರಿಕಾ ರಷ್ಯಾ ಮುಂತಾದ ದೇಶಗಳು ಕೈಗಾರಿಕೆಯಲ್ಲೆಂತೋ ಕೃಷಿ ಕ್ಷೇತ್ರದಲ್ಲಿಯೂ ಅಂತೆಯೇ ಮುಂದುವರಿದಿವೆ ಎನ್ನುವುದನ್ನು ಮರೆಯಬಾರದು. ಕೈಗಾರಿಕೆಯನ್ನು ಬೆಳೆಸಲು ಬೇಕಾದ ಪ್ರತಿಭೆ ಶ್ರಮೆ ಮತ್ತು ಅವಧಾನಗಳೇ ವ್ಯವಸಾಯೋತ್ಪಾದನೆಗೂ ಅವಶ್ಯವಾಗುತ್ತವೆ. ನಿಮ್ಮ ಪ್ರತಿಭೆ ಮತ್ತು ಸತ್ವಗಳು ಕೃಷಿಯನ್ನು ಆಧುನಿಕಗೊಳಿಸುವುದರ ಮೂಲಕ ತರುಣರನ್ನು ಆಕರ್ಷಿಸುವಂತಾಗಬೇಕು. ಬೇಸಾಯ ರಾಷ್ಟ್ರದ ಬೆನ್ನುಮೂಳೆ, ದೇಶಾಭ್ಯುದಯಕ್ಕೆ ಕೈಗಾರಿಕೆ ಎಷ್ಟು ಮುಖ್ಯವೋ ಬೇಸಾಯವೂ ಅಷ್ಟೇ ಮುಖ್ಯ ಎಂಬ ಪರಿವೆ ಅವರಲ್ಲಿ ಮೊಳೆಯುವಂತೆ ನೀವು ಪ್ರೇರಣೆ ನೀಡಬೇಕು.

ವಿವಿಧೋದ್ದೇಶ ಶಾಲೆಗಳಲ್ಲಿ ಬೇಸಾಯಕ್ಕೆ ಹೆಚ್ಚು ಗಮನ

ಕೊಡಲಾಗುತ್ತದೆಂದೂ ಶಿಕ್ಷಣ ಬಂಜೆಯಾಗದೆ ಸಾರ್ಥಕವಾಗುವಂತೆ ಎಚ್ಚರಿಕೆ ವಹಿಸಲಾಗಿದೆಯೆಂದೂ ನಾನು ತಿಳಿದೆ. ನೇಮಕ ಸಮಿತಿಯ ಸದಸ್ಯರ ಮುಂದೆ ಗುಮಾಸ್ತಗಿರಿಗೋ ಅಂಥದೇ ಯಾವುದಾದರೂ ಜುಜುಬಿ ನೌಕರಿಗೋ ಹಲ್ಲು ಕಿರಿಯುವುದಕ್ಕಿಂತ ಬೇಸಾಯ ಮಾಡುವುದು ಮೇಲೆಂಬ ಭಾವನೆ ಉನ್ನತ ಶಿಕ್ಷಣ ಪಡದ ಯುವಕರಲ್ಲಿ ಈಚೀಚೆಗೆ ಮೂಡುತ್ತಿವೆಯೆಂದು ಕೇಳಿ ಸಂತೋಷಗೊಂಡಿದ್ದೇನೆ. ಅದು ಪರಿವರ್ತನೆ ಹೊಂದುತ್ತಿರುವ ನಮ್ಮ ರಾಷ್ಟ್ರ ಭವಿಷ್ಯದ ಶುಭಸೂಚನೆಯೆಂದೇ ಬಗೆದಿದ್ದೇನೆ. ನಿಮ್ಮ ವಶದಲ್ಲಿರುವ ವಿದ್ಯಾರ್ಥಿಗಳಿಗೆ ಕೃಷಿ ವಿಜ್ಞಾನವನ್ನು ಕಲಿಸುವುದರ ಜೊತೆಗೆ, ನಿಜವಾದ ಅರಿವನ್ನೂ ಜೀವನೋತ್ಸಾಹವನ್ನೂ ಚಿಗುರಿಸಿದ್ದಾದರೆ ಅದಕ್ಕಿಂತ ಅತ್ಯುತ್ತಮ ದೇಶಸೇವೆ ಇಲ್ಲವೆಂದೇ ನಾನು ಸ್ಪಷ್ಟಪಡಿಸುತ್ತಿದ್ದೇನೆ.

ಕೊನೆಯದಾಗಿ ಒಂದೇ ಒಂದು ಮಾತು. ನಿಮಗೆ ತಿಳಿದಿರುವಂತೆ ಭಾರತ ಪ್ರಧಾನವಾಗಿ ಕೃಷಿ ದೇಶ ನಮ್ಮ ಕೃಷಿಕರು ನಿರಕ್ಷರಿಗಳು; ಅಥವಾ ಅವರಲ್ಲಿ ಹಿಡಿಮಂದಿಗೆ ದೇಶಭಾಷಾಜ್ಞಾನವಿರಬಹುದು. ಈಗ ಅನ್ಯ ಭಾಷಾ ಮಾಧ್ಯಮದ ಮೂಲಕ ಕೃಷಿ ಸಂಬಂಧವಾದ ಪ್ರೌಢಸಂಶೋಧನೆ ಸಾಗುತ್ತಿದೆ ಮತ್ತು ಉನ್ನತ ಶಿಕ್ಷಣ ನಡೆಯುತ್ತಿದೆ. ತಜ್ಞರ ಪ್ರಯತ್ನಗಳು ಫಲದಾಯಕವಾಗಿ ಅರ್ಥಪೂರ್ಣವಾಗಬೇಕಾದರೆ ಅವು ರೈತರನ್ನು ತಲುಪಬೇಕು. ಆಧುನಿಕ ಸಂಶೋಧನೆಯ ಆವಿಷ್ಕಾರಗಳು ನಾಡಿನ ಪ್ರತಿಯೊಂದು ಗುಡಿಸಿಲಿಗೂ ಹರಡಬೇಕು. ಇಂಥ ವ್ಯಾಪಕತೆ ದೇಶಭಾಷಾ ಮಾಧ್ಯಮದ ಮೂಲಕ ಮಾತ್ರ ಸಾಧ್ಯವೆಂಬ ಸಂಗತಿ ವಿವೇಕಿಗಳಿಗೆಲ್ಲ ಅರಿವಾಗಿರಬೇಕೆಂದು ತಿಳಿದುಕೊಂಡಿದ್ದೇನೆ. ನೀವು ಸಹ ಈ ದಿಶೆಯಲ್ಲಿ ಸಮಾಲೋಚನೆ ನಡೆಸಿ, ಬೇಗನೆ ಈ ಸಮಸ್ಯೆಯನ್ನು ಇತ್ಯರ್ಥಗೊಳಿಸುವಿರೆಂದು ನಂಬಿದ್ದೇನೆ.

ನಾನೀಗ 'ನೇಗಿಲಯೋಗಿ' ಕವನದ ಕೆಲವು ಪದ್ಯಗಳನ್ನೋದಿ ನನ್ನ ಭಾಷಣವನ್ನು ಮುಕ್ತಾಯಗೊಳಿಸುತ್ತೇನೆ.

ಬಾಳಿತು ನಮ್ಮೀ ನಾಗರೀಕತೆಯು
ಮಣ್ಣುಣಿ ನೇಗಿಲಿನಾಶ್ರಯದಿ
ನೇಗಿಲಹಿಡಿದಾ ಕೈಯಾಧಾರದಿ
ದೊರೆಗಳು ದರ್ಪದೊಳಾಳಿದರು
ನೇಗಿಲ ಬಲದೊಳು ವೀರರು ಮೆರೆದರು
ಶಿಲ್ಪಿಗಳೆಸದರು, ಕವಿಗಳು ಬರೆದರು

ಯಾರೂ ಅರಿಯದ ನೇಗಿಲ ಯೋಗಿಯೆ
ಲೋಕಕೆ ಅನ್ನವನೀಯುವನು
ಹೆಸರನು ಬಯಸದೆ ಅತಿಸುಖಕೆಳಸದೆ
ದುಡಿವನು ಗೌರವಕಾಶಿಸದೆ
ನೇಗಿಲಕುಳದೊಳಗಡಗಿದೆ ಕರ್ಮ,
ನೇಗಿಲ ಮೇಲೆಯೆ ನಿಂತಿದೆ ಧರ್ಮ

(ಸಾಭಾರ : ಕುವೆಂಪು ಸಮಗ್ರ ಗದ್ಯ-೨)

ಹಸಿರು ಜೀವನಶೈಲಿ : ಒಂದು ಚಿಂತನೆ

– ಗಿರಿಜಾ ಅರುಣ್‌ಕುಮಾರ್

ಭೂಮಿಯು ನಮಗೆ ಹೇಗೆ ವಾಸಯೋಗ್ಯವಾಗಿರಬೇಕು ಎಂಬುದಕ್ಕೆ ಋಗ್ವೇದದಲ್ಲಿ ಹೀಗೊಂದು ಮಂತ್ರವಿದೆ :

ಮಧುವಾತಾ ಋತಾಯತೇ ಮಧುಕ್ಷರಂತಿ ಸಿಂಧವಃ
ಮಾರ್ಧ್ವೀರ್ನಃ ಸಂತ್ವೋಷಧೀಃ ಮಧುನಕ್ತಮುತೋಷಸಿ
ಮಧುಮತ್ ಪಾರ್ಥಿವಂ ರಜ: ಮಧು ದ್ಯೌರಸ್ತು ನಃ ಪಿತಾ
ಮಧುಮಾನ್ನೋ ವನಸ್ಪತಿ: ಮಧುಮಾನ್ ಅಸ್ತು ಸೂರ್ಯಃ
ಮಾರ್ಧ್ವೀರ್ಗಾವೋ ಭವಂತು ನಃ

ಬೀಸುವ ಗಾಳಿಯು ಮಧುವಿನಿಂದ ಕೂಡಿರಲಿ (ಮಧುರವಾಗಿರಲಿ);
ಹರಿಯುವ ನೀರು ಮಧುರವಾಗಿರಲಿ;
ನಮ್ಮ ಸಸ್ಯೌಷಧಿಗಳು ಮಧುರವಾಗಿರಲಿ;
ನಮ್ಮ ಸೂರ್ಯೋದಯಾಸ್ತಗಳು ಮಧುವಿನಿಂದ ಕೂಡಿರಲಿ;
ನಮ್ಮನ್ನು ಆವರಿಸಿರುವ ಕಣಕಣಗಳೂ ಮಧುರವಾಗಿರಲಿ;
ನಮಗೆ ಆಕಾಶವು ಮಧುರವಾಗಿರಲಿ ಪಿತನೇ
ನಮಗೆ ಗಿಡಮರಗಳು ಮಧುವನ್ನೀಯಲಿ;
ಸೂರ್ಯನಿಂದ ಮಧುವು ಹರಿಯಲಿ;
ಗೋವುಗಳು ಮಧುರವಾದದ್ದನ್ನೇ ಕರೆಯಲಿ.

ಇಂತಹ ಪರಿಸರದಲ್ಲಿ ನಾವು ಜೀವಿಸಬೇಕಾದರೆ ನಾವು ಮಾಡುತ್ತಿರುವ ಕೆಲಸಗಳನ್ನೂ, ಆಲೋಚನೆಗಳನ್ನೂ ಪುನಃ ಪರೀಕ್ಷಿಸಬೇಕು.

ಪರಿಸರ ಪ್ರಜ್ಞೆ ಎಂಬುವ ಧ್ಯೇಯಕ್ಕೆ ಹಲವಾರು ಯೋಚನಾ ಲಹರಿಗಳು ಇವೆ. ಪರಿಸರಸ್ನೇಹೀ ಜೀವನಕ್ಕೆ ನಾವು ಅಳವಡಿಸಿಕೊಳ್ಳಬೇಕಾಗಿರುವ ಜೀವನ ಶೈಲಿಯೂ ಇದೆ. ಹೀಗಾಗಿ 'ಹಸಿರು ಜೀವನಶೈಲಿ' ಎಂಬ ಶಿರೋನಾಮೆಯ ನಾಣ್ಯಕ್ಕೆ ಎರಡು ಮುಖಗಳು : ಒಂದು ಮನಃಸ್ಥಿತಿ, ಇನ್ನೊಂದು ಕೃತಿ.

ಮೊದಲು ಮನಃಸ್ಥಿತಿಯನ್ನು – ಅಂದರೆ ಹಲವೊಂದು ಯೋಚನಾಲಹರಿಗಳನ್ನು ನೋಡೋಣ :

೧. ನಮ್ಮ ಬೆಳವಣಿಗೆ ಪ್ರಕೃತಿಯನ್ನು ಆಧರಿಸಿ ನಿಂತಿದೆ. ಬೆಳವಣಿಗೆಗೆ ಪರಿಮಿತಿಗಳು ಉಂಟೇ? ನಾವು ಯಾವುದನ್ನು ಬೆಳವಣಿಗೆ ಎಂದು ಕರೆಯುತ್ತೇವೆಯೋ ಅದಕ್ಕೆ ಒಂದು ಮಿತಿಯನ್ನು ಇಟ್ಟುಕೊಳ್ಳಬೇಕೆ?

೨. "ಮಾನವ ಜನ್ಮ ದೊಡ್ಡದೋ" ಎಂದು ದಾಸರು ಹೇಳಿದಾಕ್ಷಣ ಪ್ರಕೃತಿಯ ಕೇಂದ್ರ ಬಿಂದು ಮಾನವನೇ ಎಂದು ಭಾವಿಸುವುದು ಸಾಧುವೂ ಅಲ್ಲ, ಸಿಂಧುವೂ ಅಲ್ಲ (neither right nor reasonable)

೩. ಚರಾಚರಗಳಲ್ಲಿ ಒಂದು ನಿರ್ದಿಷ್ಟ ಪ್ರಕ್ರಿಯೆಯ ಮೂಲಕ ಕಾಲಕಾಲಕ್ಕೆ "ಸಹಜ" ಎನ್ನುವ ಸ್ಥಿತಿ ಕಾಣುತ್ತದೆ. ಅದನ್ನು ಪ್ರಾಕೃತಿಕ ಸಮತೋಲನ ಅನ್ನುತ್ತೇವೆ. ಮನುಷ್ಯಪ್ರವೇಶದಿಂದ ಚರಾಚರಗಳಿಗೆ ಉಪದ್ರವ ಉಂಟಾದರೆ ಅಸಹಜ ಸ್ಥಿತಿಗಳು ಕಂಡುಬಂದು ಪ್ರಾಕೃತಿಕ ಅಸಮತೋಲನ ಉಂಟಾಗುತ್ತದೆ. ಇದು ಪದೇ ಪದೇ ಆದಲ್ಲಿ 'ಪರಿಸ್ಥಿತಿ ಸೂಕ್ಷ್ಮವಾಗಿದೆ' ಎಂದು ಭಾವಿಸಬಹುದು.

೪. ನಾವು ಅಲ್ಪಸ್ವಲ್ಪ – ಹೆಚ್ಚುಕಡಿಮೆ ಮಾಡಿದರೆ, ಇಷ್ಟು ದೊಡ್ಡ ಭೂಮಿಗೆ ಏನೂ ಆಗುವುದಿಲ್ಲವೆಂಬ, ತಿರುಳಿಲ್ಲದ ಪಲಾಯನವಾದ.

೫. ಕೊನೆಯದಾಗಿ – ಕಾಲ ಮಿಂಚಿಹೋಗಿದೆ! ಪರಿಸ್ಥಿತಿ ಕೈ ಮೀರಿದೆ.. ಇಷ್ಟರಲ್ಲೇ ನಾವು ಎಲ್ಲವನ್ನೂ ಕಳೆದುಕೊಳ್ಳಲಿದ್ದೇವೆ.. ಪ್ರಳಯವು ಸನ್ನಿಹಿತವಾಗಿದೆ... ಇತ್ಯಾದಿ ಯೋಚನೆಗಳು (doomsday prophesies)

ಈ ಮೇಲೆ ಹೇಳಿದ ಐದೂ, ಪ್ರಜ್ಞೆ ಎಂಬ ಮುಖದ, ಹಲವು ಧ್ವನಿಗಳು. ಇದನ್ನು ಹಿನ್ನೆಲೆಯಾಗಿಟ್ಟುಕೊಂಡು, ಸದಾ ಬಿರುಗಾಳಿಯನ್ನು ಎದುರಿಸುವ ಅಮೆರಿಕದ ರಾಜ್ಯವಾದ ಫ್ಲೋರಿಡಾದ ವಿಶ್ವವಿದ್ಯಾಲಯದವರು ಒಂದು ಸಮೀಕ್ಷೆಯನ್ನು ೨೦೧೦–೧೧ರಲ್ಲಿ ಮಾಡಿದರು. ಅದರಲ್ಲಿ ಕೇಳಿದ ಹಲವು ಪ್ರಶ್ನೆಗಳು ಯಾವ ಯೋಚನಾಕ್ರಮವು ಯಾವ ವರ್ಗದ ಜನರಲ್ಲಿ ಹೆಚ್ಚಾಗಿದೆ ಎಂಬುದನ್ನು ನಿರೂಪಿಸುವವು. ಪ್ರಶ್ನೆಗಳು ಹೀಗಿವೆ.

೧. ಭೂಮಿಯ ಜನಸಂಖ್ಯೆಯು ಭೂಮಿ ಹೊರುವುದಕ್ಕಿಂತ ಹೆಚ್ಚಾಗಿ ಬೆಳೆಯುತ್ತಿದೆಯೇ?

೨. ನಾವು ನಮಗೆ ಅನುಕೂಲವಾಗುವಷ್ಟರಮಟ್ಟಿಗೆ ಪರಿಸರ ಪ್ರಕೃತಿಗಳನ್ನು ತಿದ್ದಿಕೊಳ್ಳಬಹುದೇ?

೩. ಮಾನವರು ಪ್ರಕೃತಿಯನ್ನು ನಿಯಂತ್ರಿಸಿದಾಗೆಲ್ಲ ಪ್ರಕೃತಿಯು ಅದಕ್ಕೆ ವ್ಯತಿರಿಕ್ತವಾದ ಪರಿಣಾಮಗಳನ್ನು ಉಂಟುಮಾಡುತ್ತದೆಯೇ?

೪. ಮಾನವನ ಜಾಣತನವು ಭೂಮಿ ಬರಡಾಗುವುದನ್ನು ತಪ್ಪಿಸಬಲ್ಲುದೇ?

೫. ಮಾನವರು ಪ್ರಕೃತಿಯನ್ನು ಅತಿಯಾಗಿ ನಿಂದಿಸುತ್ತಿದ್ದಾರೆಯೇ?

೬. ಸದುಪಯೋಗ ಮಾಡಿಕೊಂಡರೆ ಪ್ರಾಕೃತಿಕ ಸಂಪನ್ಮೂಲಗಳು ಹೇರಳವಾಗಿ ಸಿಗುತ್ತವೆ. (ಹೌದು / ಇಲ್ಲ)

೭. ಪ್ರಾಣಿ ಮತ್ತು ಸಸ್ಯ ಸಂಕುಲಗಳಿಗೆ ಜೀವಿಸಲು ಮಾನವನಷ್ಟೇ ಅಧಿಕಾರವಿದೆ.

೮. ಔದ್ಯಮೀಕರಣಗೊಂಡ ರಾಷ್ಟ್ರಗಳ ಪ್ರಭಾವವನ್ನು ತಡೆದುಕೊಂಡು ಸಮತೋಲನ ಉಳಿಸಿಕೊಳ್ಳುವ ಧಾರಣಶಕ್ತಿ ಪ್ರಕೃತಿಗಿದೆ.

೯. ನಾವೆಷ್ಟೇ ಜಾಣರಾದರೂ ಪರಿಸರ ನಿಯಮಗಳಿಗೆ ತಲೆಬಾಗಲೇಬೇಕು.

೧೦. ನಮ್ಮ ಮುಂದಿರುವ ಪರಿಸರ ವಿಕೋಪದ ಬಗೆಗಿನ ವಾದಗಳು ಬಹಳ

ಉತ್ಪ್ರೇಕ್ಷೆಯಿಂದ ಕೂಡಿವೆ.

೧೧. ನಮ್ಮ ಧರೆಯು ಪರಿಮಿತವಾಗಿದ್ದು ಅನಿಮಿಂಯತವಾದ ಜಾಗೆಯನ್ನಾಗಲೀ, ಸಂಪನ್ಮೂಲಗಳನ್ನಾಗಲೀ ಹೊಂದಿಲ್ಲ.

೧೨. ಪ್ರಕೃತಿಯನ್ನು ಆಳಲೆಂದೇ ಮನುಷ್ಯಸೃಷ್ಟಿಯಾಗಿದೆ.

೧೩. ಪ್ರಾಕೃತಿಕ ಸಮತೋಲನ ಬಹಳ ಸೂಕ್ಷ್ಮವಾಗಿದ್ದು ಯಾವಾಗ ಬೇಕಾದರೂ ಜಾರಬಹುದು.

೧೪. ಒಂದಲ್ಲ ಒಂದು ದಿನ ಪರಿಸರದ ಮೇಲೆ ಪ್ರಭುತ್ವ ಸ್ಥಾಪಿಸುವಷ್ಟು ಬುದ್ಧಿವಂತರಾಗುತ್ತೇವೆ.

೧೫. ಹೀಗೇ ಮುಂದುವರಿದರೆ ಇಷ್ಟರಲ್ಲೇ ನಡೆಯುವ ಪ್ರಳಯಕ್ಕೆ ನಾವೆಲ್ಲರೂ ಸಾಕ್ಷಿಗಳಾಗಬೇಕಾಗುತ್ತದೆ.

ಹಸಿರು ಜೀವನಶೈಲಿಯ ಮಾನಸಿಕ ಆಯಾಮಗಳನ್ನು ನೋಡಿದ್ದಾಯಿತು. ಇನ್ನು ನಮ್ಮ ದೈನಂದಿನ ಅಥವಾ ಸಾಂದರ್ಭಿಕ ಕೆಲಸಗಳ ಶೈಲಿಯನ್ನು ಹೇಗೆ ತಿದ್ದಿಕೊಳ್ಳಬಹುದು? ಇದನ್ನು ಉತ್ತೇಜಿಸಲೆಂದೇ ಹಲವಾರು ಸಂಘ ಸಂಸ್ಥೆಗಳಿವೆ. ವಿವಿಧ ಉದ್ಯೋಗಗಳಲ್ಲಿ, ಅಥವಾ ಕೆಲಸಗಳಲ್ಲಿ ತೊಡಗಿರುವವರಿಗೆ ಅವರು ಹೇಳುವ ಕಿವಿಮಾತು ಯಾ ಸಲಹೆಗಳನ್ನು ಈಗ ನೋಡೋಣ.

<u>ನೀವು ಮನೆ ಕಟ್ಟುತ್ತಿದ್ದರೆ ಅಥವಾ ಕಟ್ಟಿಸುತ್ತಿದ್ದರೆ :</u>

▪ 'ವಾಸ್ತು'ವಿಗಿಂತ 'ವಾಸ್ತವ' ಸ್ಥಿತಿಯನ್ನು ಅರಿತು ನಕ್ಷೆ ತಯಾರಿಸಿರಿ.

▪ ಮನೆಗಳಿಂದಲೂ ಅಪಾಯಕಾರಿ ಅನಿಲಗಳು (ಇಂಗಾಲದ ಆಕ್ಸೈಡ್‌ಗಳು, ಗಂಧಕದ ಡೈ ಆಕ್ಸೈಡ್, ಮೀಥೇನ್, ಧೂಳು ಇತ್ಯಾದಿ) ಹೊರಚೆಲ್ಲುತ್ತವೆ. ಇದರ ನಿಯಂತ್ರಣ ಬಹಳ ಮುಖ್ಯ.

▪ ಬಿಸಿಲು, ಗಾಳಿ ಹಾಗೂ ಭೂಮಿಯ ಇಳಿಜಾರು – ಈ ಸಹಜ ಅಂಶಗಳನ್ನು ಬಳಸಿಕೊಳ್ಳಿ.

▪ ಬಳಸಿದ ನೀರಿನ ಪುನರ್ಬಳಕೆಯ ವಿಧಾನಗಳು ಹಲವಾರಿವೆ. ಕೆಲವೊಂದನ್ನಾದರೂ ಅಳವಡಿಸಿಕೊಳ್ಳಿ.

▪ ಒಳ ಅಳತೆಗಳನ್ನು ನಿಷ್ಕರ್ಷೆ ಮಾಡುವಾಗ ಪ್ಲೈವುಡ್, ನೆಲದ ಅಥವಾ ಗೋಡೆಯ ಟೈಲ್ಸ್‌ಗಳ ಪೂರ್ಣ ಅಳತೆಯನ್ನು ಗಮನದಲ್ಲಿಟ್ಟುಕೊಳ್ಳಿ. ಕತ್ತರಿಸಬೇಕಾದ ಅನಿವಾರ್ಯತೆಯನ್ನು ಮೊದಲೇ ತಪ್ಪಿಸಿಕೊಳ್ಳಿ.

▪ ಕೈ ತೋಟಕ್ಕಾಗಲೀ, ಅಲಂಕಾರಕ್ಕಾಗಲೀ ಆದಷ್ಟು ನಿಮ್ಮ ನಿಮ್ಮ ಪ್ರದೇಶದ ಸಸ್ಯಗಳನ್ನೇ ಬಳಸಿಕೊಳ್ಳಿ.

▪ ಯಾವಾಗಲೂ ನೀರಿನ ಉಳಿತಾಯದ ಬಗ್ಗೆ ಕಾಳಜಿಯಿರಲಿ.

▪ ಸಮಾನ ಮನಸ್ಕರೊಂದಿಗೆ ವಿಚಾರ ವಿನಿಮಯ ಮಾಡಿಕೊಳ್ಳಿ.

▪ ಸ್ವಚ್ಛತೆ ಬಗ್ಗೆ ಕಿವಿಮಾತು : ಕಟ್ಟಡಗಳ ಬಿರುಕುಗಳಲ್ಲಿ ಬೆಳೆಯುವ ಕಳೆಗಳನ್ನು ಹೋಗಲಾಡಿಸಲು ಕುದಿಯುವ ನೀರನ್ನು ಬಳಸಿ.

▪ ವ್ಯಾಕ್ಯೂಮ್ ಕ್ಲೀನರ್‌ಗಿಂತ ಪೊರಕೆ ಬಳಕೆ ಒಳ್ಳೆಯದು.

ನೀವು ಕಲಾವಿದ, ಕುಶಲಕರ್ಮಿ ಅಥವಾ ಅಲಂಕಾರಿಕ ಕೆಲಸ ಯಾ ಉದ್ಯೋಗದಲ್ಲಿದ್ದರೆ :

▪ ಹೆಚ್ಚಾಗಿ ಬಾಳಿಕೆ ಬರುವಂಥ ಕಲಾಕೃತಿಗಳನ್ನು ಮಾಡಿ.

▪ ಸಹಜವಾದ, ಪ್ರಕೃತಿದತ್ತವಾದ ಕಚ್ಚಾ ವಸ್ತುಗಳನ್ನು ಬಳಸಿ.

▪ ಸ್ವಚ್ಛತಾ ದ್ರಾವಣಗಳು ಸುಲಭವಾಗಿ ಹಾಗೂ ಕ್ಷೇಮವಾಗಿ ಪರಿಸರದಲ್ಲಿ ಬೆರೆತುಹೋಗುವಂತಿರಲಿ (bio-degradable)

▪ ಸ್ಪ್ರೇ ಉಪಯೋಗಿಸಲೇಬೇಕಾದಲ್ಲಿ ಮುಂದಿನ ಬಳಕೆಗಾಗಿ ಪುನಃ ತುಂಬಿಸಲು ರೀಫಿಲ್ ಪ್ಯಾಕ್ ವ್ಯವಸ್ಥೆ ಮಾಡಿಕೊಳ್ಳಿ. ರೀಫಿಲ್ ಸಿಗದಂತಹ ಸ್ಪ್ರೇ ಬಾಟಲಿಗಳನ್ನು ಆದಷ್ಟೂ ಕೊಳ್ಳಲೇಬೇಡಿ.

▪ ನಿಷ್ಪ್ರಯೋಜಕ ರಾಸಾಯನಿಕಗಳನ್ನು ಬಿಸಾಡುವ ಮೊದಲು ನಿಷ್ಕ್ರಿಯಗೊಳಿಸಿ. (neutralize) ಇದರ ಮಾಹಿತಿಯನ್ನು ಮೊದಲೇ ಸಂಪಾದಿಸಿ.

▪ ವಸ್ತುಗಳ ಪುನರ್ಬಳಕೆ ನಿಮ್ಮ ಧ್ಯೇಯಗಳಲ್ಲಿ ಒಂದಾಗಿರಲಿ.

▪ ಮುಚ್ಚಳ ತೆರೆದ ಡಬ್ಬಿಗಳನ್ನು ಖಾಲಿಯಾಗುವತನಕ ಉಪಯೋಗಿಸುವ ಅಭ್ಯಾಸವನ್ನು ಬೆಳೆಸಿಕೊಳ್ಳಿ.

▪ ಬ್ರಷ್, ಕಡ್ಡಿ ಅಥವಾ ಇನ್ನಾವುದೇ ಉಪಕರಣಗಳನ್ನು ತೊಳೆಯುವಾಗ ಒಂದು ಪಾತ್ರೆಯಲ್ಲಿಟ್ಟುಕೊಂಡು ತೊಳೆಯಿರಿ. ಇದು ನಲ್ಲಿಯ ನೀರಿನ ಮಿತಬಳಕೆಗೆ ಸಹಾಯವಾಗುತ್ತದೆ.

▪ ನಿಮ್ಮ ಗ್ರಾಹಕರೊಂದಿಗೆ ಹಸಿರು ಜೀವನಶೈಲಿಯ ಬಗ್ಗೆ ಚರ್ಚಿಸಿ.

▪ ಎಲ್ಲಾ ಸಲಕರಣೆಗಳನ್ನು ಶುಭ್ರವಾಗಿ ಮತ್ತು ಕೆಲಸ ಮಾಡುವ ಸ್ಥಿತಿಯಲ್ಲಿ ಇಟ್ಟುಕೊಳ್ಳಿ.

▪ ಸಮಾನ ಮನಸ್ಕರೊಂದಿಗೆ ಒಂದು ವೇದಿಕೆಯನ್ನು ಏರ್ಪಡಿಸಿಕೊಳ್ಳಿ.

ನೀವು ಅಡುಗೆಯವರಾಗಿದ್ದರೆ ಅಥವಾ ಅಡುಗೆ ಮಾಡಿಸುತ್ತಿದ್ದರೆ :

▪ ಆದಷ್ಟೂ ಪದಾರ್ಥಗಳು ಸಾವಯವ ಕೃಷಿ ಮೂಲದಿಂದ ಬಂದಿದೆ ಎಂಬುದನ್ನು ಖಚಿತಪಡಿಸಿಕೊಳ್ಳಿ.

▪ 'ತುದಿಯಿಂದ ತೊಟ್ಟಿನವರೆಗೆ' ಅಂದರೆ ತರಕಾರಿಯ ಸಂಪೂರ್ಣ ಉಪಯೋಗಕ್ಕೆ ಆದ್ಯತೆ ಇರಲಿ.

▪ ಆಯಾ ಋತುವಿನ ತರಕಾರಿಯನ್ನು ಹೆಚ್ಚಾಗಿ ಉಪಯೋಗಿಸಿ.

▪ ಮಾಂಸಾಹಾರಕ್ಕಿಂತ ಸಸ್ಯಾಹಾರವು ಪರಿಸರಸ್ನೇಹಿ.

▪ ಅಡಿಗೆ ತ್ಯಾಜ್ಯಗಳನ್ನು ಗೊಬ್ಬರಕ್ಕಾಗಿ ಮೀಸಲಿಡಿ.

▪ ಬಿ.ಟಿ. ತರಕಾರಿಗಳನ್ನು (genetically modified) ಬಳಸಬೇಡಿ.

▪ ಸಮಾನ ಮನಸ್ಕರೊಂದಿಗೆ ಒಂದು ವೇದಿಕೆಯನ್ನು ಏರ್ಪಡಿಸಿಕೊಳ್ಳಿ.

ಧಾರ್ಮಿಕ ಸಮಾರಂಭಗಳಲ್ಲಿ :

▪ ಪರಿಸರಸ್ನೇಹಿ ಉಪನ್ಯಾಸಗಳು ಅವಶ್ಯಕ.

▪ ಹಸಿರು ಜೀವನಶೈಲಿಯ ಪ್ರಶಂಸೆಯನ್ನು ಇಂತಹ ವೇದಿಕೆಗಳ ಮೇಲೆ

ಸಂಕೋಚವಿಲ್ಲದೆ ಮಾಡಿ.

ಆಫೀಸ್ ಕೆಲಸಗಾರರಿಗೆ :

▪ ಎಲ್ಲಾ ಎಲೆಕ್ಟ್ರಾನಿಕ್ ಉಪಕರಣಗಳು ನಿರ್ದಿಷ್ಟ ಸಮಯದ ನಂತರ ಮಿತಬಳಕೆಯ ಸ್ಥಿತಿಗೆ ಬರುವಂತೆ, ಅಥವಾ ಆಫ್ ಆಗುವಂತೆ ವ್ಯವಸ್ಥೆ ಮಾಡಿ.

▪ ಎಲ್ಲಾ ಉಪಕರಣಗಳ ಬಳಿ ಗೋಡೆಗೆ ಒಂದು ಮಾಸ್ಟರ್ ಸ್ವಿಚ್ (ಡಿ.ಪಿ) ಅಳವಡಿಸಿ. (prevents leakage)

▪ ಕಾಗದಕ್ಕಿಂತ ಎಲೆಕ್ಟ್ರಾನಿಕ್ ರೂಪದಲ್ಲಿ ವಿಷಯ ಜೋಡಣೆ ಅಥವಾ ತಿದ್ದುವ ಕೆಲಸಗಳನ್ನು ಮಾಡಿ.

▪ ಅಗತ್ಯವಿಲ್ಲದಾಗ ಮುದ್ರಣ ಮಾಡಬೇಡಿ.

▪ ಎಲ್ಲರಿಗೂ ರವಾನೆಯಾಗಬೇಕಾಗಿರುವ ಸಂದೇಶವನ್ನು ಎಲ್ಲರಿಗೂ ಕಾಣುವ ಹಲಗೆಯ ಮೇಲೆ ಬರೆಯಿರಿ.

▪ ನೀವು ಬಳಸುವ ಕಾಗದ ಕ್ಲೋರೀನ್ ಮುಕ್ತವಾಗಿರಲಿ. (ಓಝೋನ್ ಪದರಕ್ಕೆ ಹಾನಿ)

▪ ಯಾವುದೇ ಪ್ಯಾಕಿಂಗ್ ಸಂದರ್ಭದಲ್ಲಿ ನಿಮ್ಮ ಕಛೇರಿಯ ತ್ಯಾಜ್ಯ ಕಾಗದಗಳನ್ನು ಮೊದಲೇ ಹರಿದು ಇಟ್ಟುಕೊಂಡು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಿ.

▪ ಗೋಪ್ಯತೆಗಾಗಿ ಕಾಗದಗಳನ್ನು ಹರಿಯಲು ಶ್ರೆಡ್ಡರ್ ಯಂತ್ರವನ್ನು ಬಳಸಬಹುದು.

▪ ಆಫೀಸಿಗೆ ಓಡಾಡಲು ಆದಷ್ಟೂ ಸಾರ್ವಜನಿಕ ಸಾರಿಗೆಯನ್ನು ಉಪಯೋಗಿಸಿ.

▪ Use and Throw ಸಂಸ್ಕೃತಿಯನ್ನು ಹತೋಟಿಯಲ್ಲಿರಿಸಿ.

▪ ಮನೆಯಿಂದ ಕಾಫಿ ಲೋಟಗಳನ್ನು ತಂದಿಟ್ಟುಕೊಳ್ಳಲು ಸಹೋದ್ಯೋಗಿಗಳಲ್ಲಿ ವಿನಂತಿ ಮಾಡಿಕೊಳ್ಳಿ.

ಇನ್ನು ಬೇರೆ ಬೇರೆ ಕ್ಷೇತ್ರಗಳು, ಅಂದರೆ,

▪ ಮನೆಕೆಲಸದವರಿಂದ ಹಿಡಿದು ಕಾರ್ಖಾನೆಗಳನ್ನು ಶುಚಿಗೊಳಿಸುವವರ ತನಕ.

▪ ರೈತರು ಮಾಡಬಹುದಾದ ಭೂಮಿ, ನೀರು, ಸಸ್ಯಗಳು ಹಾಗೂ ಧಾನ್ಯಗಳಿಗೆ ಸಂಬಂಧಪಟ್ಟಂತೆ ಮಾಡಬಹುದಾದ ಕೆಲಸಗಳು.

▪ ತೋಟಗಾರಿಕೆಯಲ್ಲಿ ತೊಡಗುವರು.

▪ ಜಲಸಾರಿಗೆ ಮತ್ತು ಮೀನುಗಾರಿಕೆಯಲ್ಲಿ ತೊಡಗುವವರು.

▪ ಶಿಕ್ಷಣವನ್ನು ಉದ್ಯಮವನ್ನಾಗಿ ತೆಗೆದುಕೊಂಡವರು.

▪ ಸಭೆ, ಸಮಾರಂಭಗಳನ್ನು ನಿರ್ವಹಿಸುವವರು.

▪ ಮತ್ತೆಲ್ಲಾ ವ್ಯಾಪಾರಸ್ಥರು.

▪ ಇವರಿಗೆ ಪ್ರತ್ಯೇಕ ನೀತಿಸಂಹಿತೆಗಳನ್ನು ಮಾಡಿಡಬಹುದು.

ಯಾವುದೇ ವ್ಯಕ್ತಿ, ಸಂಘ ಅಥವಾ ಸಂಸ್ಥೆ ಅಳವಡಿಸಿಕೊಳ್ಳಬಹುದಾದ ಕಿರುಕೈಪಿಡಿ ಕೆಳಗಿನಂತಿದೆ :

- ಮಿತಬಳಕೆ, ಮರುಬಳಕೆ, ಸಾಗಾಣಿಕೆಯಲ್ಲಿ ವಿವೇಚನೆ.
- ಅಪಾಯಕಾರಿ ವಸ್ತುಗಳನ್ನು ಎಚ್ಚರಿಕೆಯಿಂದ ಬಳಸುವುದು.
- ಶಕ್ತಿ ಮತ್ತು ಇಂಧನ ಮೂಲಗಳ ಬಗ್ಗೆ ಕಟ್ಟೆಚ್ಚರ.
- ಏನನ್ನು ಕೊಳ್ಳಬೇಕಾದರೂ, 'ಇದು ಬೇಕೆ?', 'ಈಗ ಬೇಕೆ?', 'ಇಷ್ಟು ಬೇಕೆ?' ಎನ್ನುವ ಜವಾಬ್ದಾರಿಯುತ ವಿವೇಚನೆ.

* * *

ಸಂತಾಪ . . .

ವರ್ಣಬೇಧ ಮತ್ತು ಇತರ ವಿವಿಧ ಪ್ರಕಾರದ ಶೋಷಣೆಗೆ ಒಳಗಾಗಿದ್ದ ದಕ್ಷಿಣ ಆಫ್ರಿಕಾದ ಮೂಲ ನಿವಾಸಿಗಳ ಆತ್ಮ ಗೌರವಕ್ಕಾಗಿ, ಸಮಾನತೆಗಾಗಿ ಹಾಗೂ ಜಗತ್ತಿನ ಎಲ್ಲಾ ಅಸಮಾನತೆಯ ವಿರುದ್ಧದ ಧ್ವನಿಯಾಗಿದ್ದ, ಭಾರತರತ್ನ ಪಡೆದಿದ್ದ ಅಹಿಂಸಾವಾದಿ ನೆಲ್ಸನ್ ಮಂಡೇಲಾ ೬-೧೨-೧೩ ಶುಕ್ರವಾರದಂದು ನಿಧನರಾದರು. ಅವರ ನಿಧನಕ್ಕೆ ಜನಪದ ವಿಚಾರ ತನ್ನ ಅತೀವ ವ್ಯಥೆಯನ್ನು ವ್ಯಕ್ತಪಡಿಸುತ್ತದೆ.

* * *

ಗಾಂಧೀ ವಿಚಾರವನ್ನು ಕನ್ನಡಿಗರಿಗೆ ಪರಿಚಯಿಸುವ ಕಾಯಕದಲ್ಲಿ ತೊಡಗಿದ್ದ ಚಿಂತಕ, ಲೇಖಕ ಮತ್ತು ಸಹೃದಯಿಯಾಗಿದ್ದ ನೀಲತ್ತಹಳ್ಳಿ ಕಸ್ತೂರಿಯವರು ತಮ್ಮ ೮೨ನೇ ವಯಸ್ಸಿನಲ್ಲಿ ನಿಧನರಾದರು. ಜನಪದ ವಿಚಾರವು ತನ್ನ ಆತ್ಮೀಯ ದುಃಖವನ್ನು ವ್ಯಕ್ತಪಡಿಸುತ್ತದೆ ಮತ್ತು ಮೃತರ ಆತ್ಮಕ್ಕೆ ಶಾಂತಿ ಕೋರುತ್ತದೆ.

* * *

ಮೈಸೂರು ಯದುವಂಶದ ಕೊನೆಯ ಕುಡಿಯಾಗಿದ್ದ ಶ್ರೀ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್‌ರವರು ತಮ್ಮ ೬೦ನೇ ವಯಸ್ಸಿನಲ್ಲಿ ನಿಧನರಾದರು. ಅವರು ಸಜ್ಜನಿಕೆಯ ಸಾಕಾರಮೂರ್ತಿಯಾಗಿದ್ದರು. ಅವರ ನಿಧನಕ್ಕಾಗಿ ಜನಪದ ವಿಚಾರ ತನ್ನ ಸಂತಾಪ ಸೂಚಿಸುತ್ತದೆ.

* * *

ನವಿರಾದ ಭಾವಕವಿ, ಕನ್ನಡ ಸಾಹಿತ್ಯ ಲೋಕದ ಬೆಳ್ಳಿಚುಕ್ಕಿಯಂತಿದ್ದ ಜಿ.ಎಸ್.ಶಿವರುದ್ರಪ್ಪನವರು ೨೩-೧೨-೨೦೧೩ರಂದು ಶಿವೈಕ್ಯರಾದರು. ಅವರ ಆತ್ಮಕ್ಕೆ ಜನಪದ ವಿಚಾರ ಶಾಂತಿ ಕೋರುತ್ತದೆ.

ಜನಪದ ಸೇವಾ ಟ್ರಸ್ಟ್ ಸಮಾಚಾರ

ಬೆಂಗಳೂರು ಬಳಿ ಇರುವ 'ಸೆಂಟರ್ ಫಾರ್ ಲರ್ನಿಂಗ್' ಶಿಕ್ಷಣ ಸಂಸ್ಥೆಯ ೧೫ ವಿದ್ಯಾರ್ಥಿಗಳು ತಮ್ಮ ಶಾಲೆಯ ಶೈಕ್ಷಣಿಕ ಪಠ್ಯ ಕ್ರಮದ ಅನುಸಾರವಾಗಿ ಗ್ರಾಮೀಣ ಪ್ರದೇಶದ ಜನಜೀವನ ಅರ್ಥ ಮಾಡಿಕೊಳ್ಳುವ ಉದ್ದೇಶದಿಂದ ಹೆದ್ದಾರಿಯನ್ನು ಬಿಟ್ಟು ಗ್ರಾಮಾಂತರ ಪ್ರದೇಶದ ರಸ್ತೆಗಳ ಮೂಲಕ ಸೈಕಲ್ ಸವಾರಿ ಮಾಡಿಕೊಂಡು ಮೇಲುಕೋಟೆಗೆ ಬಂದರು. ಜನಪದ ಸೇವಾ ಟ್ರಸ್ಟ್‌ಗೆ ಭೇಟಿ ಕೊಟ್ಟರು. ಟ್ರಸ್ಟಿನ ಚಟುವಟಿಕೆ ಬಗ್ಗೆ ತಿಳಿದುಕೊಂಡರು. ಎರಡು ರಾತ್ರಿಗಳನ್ನು ಹೊಸ ಜೀವನ ದಾರಿ ಕೇಂದ್ರದಲ್ಲಿ ಕಳೆದು ತಮ್ಮ ಶೈಕ್ಷಣಿಕ ಯಾತ್ರೆ ಮುಂದುವರೆಸಿದರು.

ಬೆಂಗಳೂರು ನಗರದಲ್ಲಿರುವ ನಾಗಾರ್ಜುನ ಕಾಲೇಜಿನ ಸುಮಾರು ೨೫ ವಿದ್ಯಾರ್ಥಿ ವಿದ್ಯಾರ್ಥಿನಿಯರು ಎರಡು ದಿನಗಳ ಮಟ್ಟಿಗೆ ಹೊಸ ಜೀವನ ದಾರಿ ಕೇಂದ್ರದಲ್ಲಿ ಜಾಗತೀಕರಣ ಮತ್ತು ಪರಿಸರ ವಿನಾಶ ಎಂಬ ವಿಷಯವಾಗಿ ಶಿಬಿರ ನಡೆಸಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಅಶೋಕ್‌ರಾವ್, ಮ್ಯಾನ್ ಸಂಸ್ಥೆಯ ಮನು, ಪ್ರೊ॥ ಅಸಾದಿ, ಸಂತೋಷ್ ಕೌಲಗಿ, ಪರಿಸರವಾದಿ ರಘು ಮುಂತಾದವರು ವಿಷಯದ ಮೇಲೆ ಬೆಳಕು ಚೆಲ್ಲಿದರು.

ದತ್ತು ಕೇಂದ್ರ ವಿಭಾಗದಲ್ಲಿ ಆಶ್ರಯ ಪಡೆಯುತ್ತಿದ್ದ ಸುಮಾರು ೫ ತಿಂಗಳ ಸುಚೇತನಾ ಎಂಬ ಹೆಣ್ಣು ಮಗುವನ್ನು ದತ್ತು ಕೊಡಲಾಯಿತು. ಕಡಿಮೆ ತೂಕದ ಮಗುವೊಂದನ್ನು ಆರೋಗ್ಯ ಸುಧಾರಣೆಗಾಗಿ ಆಸ್ಪತ್ರೆಗೆ ಸೇರಿಸಲಾಗಿತ್ತು. ಮಗು ಗುಣಮುಖವಾದ ಮೇಲೆ ಕೇಂದ್ರಕ್ಕೆ ತರಲಾಯಿತು.

ಟ್ರಸ್ಟಿನ ಅಭಿಮಾನಿಗಳಲ್ಲಿ ಒಬ್ಬರಾದ ಬೆಂಗಳೂರಿನಲ್ಲಿರುವ ಶ್ರೀ ರಮಾಕಾಂತ ಅನವಟ್ಟಿ ಮತ್ತು ಕುಟುಂಬ ಹಾಗೂ ಸರಸ್ವತಿಯವರು ಟ್ರಸ್ಟಿಗೆ ಭೇಟಿಕೊಟ್ಟರು.

೨೦೧೪ ಜನೆವರಿ ೪ ಶನಿವಾರದಂದು ಇದುವರೆಗೆ ದತ್ತು ಕೊಡಲಾದ ಮಕ್ಕಳ ಮತ್ತು ಮಕ್ಕಳನ್ನು ದತ್ತು ಪಡೆದ ತಂದೆ-ತಾಯಿಗಳ ಸ್ನೇಹಮಿಲನವನ್ನು ಹೊಸ ಜೀವನ ದಾರಿ ಕೇಂದ್ರದಲ್ಲಿ ಏರ್ಪಡಿಸಲಾಗಿದೆ.

ಜನಪದ ನಿಲಯದ ಅಂತರಂಗದಲ್ಲಿ.. ೧೧೯

– ಸುರೇಂದ್ರ ಕೌಲಗಿ



ಜನಪದ ಸೇವಾ ಟ್ರಸ್ಟಿನ ಹಳೆಯ ಅಂಗವಿಕಲ ವಿದ್ಯಾರ್ಥಿಗಳಲ್ಲಿ ಕೆಲವರು ತಮ್ಮ ಆತ್ಮವಿಶ್ವಾಸ ಮತ್ತು ಮನೋಬಲದಿಂದ ತಮ್ಮ ದೈಹಿಕ ನ್ಯೂನತೆಗಳನ್ನು ಮರೆಮಾಚುವಂತೆ ಜೀವನದಲ್ಲಿ ಯಶಸ್ಸು ಸಾಧಿಸಿದ್ದಾರೆ. ಅಂಥವರ ಉದಾಹರಣೆಗಳನ್ನು ಈ ಮೊದಲು ಈ ಅಂಕಣದಲ್ಲಿ ದಾಖಲಿಸಲಾಗಿತ್ತು. ಈಗ ಕರುಣಾಗೃಹದ ಹೆಮ್ಮೆಯ ಒಂದು ಯಶೋಗಾಥೆ ಕರ್ನಾಟಕದ ಜನಪ್ರಿಯ ದಿನಪತ್ರಿಕೆಯಲ್ಲಿ ಪ್ರಕಟವಾಗಿದೆ. ಬಸವರಾಜ ಹವಾಲ್ದಾರ ಅವರು ಬರೆದಿರುವ ಕರುಣಾಗೃಹದ ಹಿರಿಯ ವಿದ್ಯಾರ್ಥಿ ಶಿವಕುಮಾರ್‌ರವರ ಯಶೋಗಾಥೆಯನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ.

ಬಾಲ್ಯದಿಂದಲೇ ಎರಡೂ ಕಾಲು ಸ್ವಾಧೀನವಿಲ್ಲ. ಇಲ್ಲಿಯವರೆಗೂ ಹೆಜ್ಜೆ, ಹೆಜ್ಜೆಗೂ ಕಷ್ಟಗಳ ಸರಮಾಲೆ. ನನ್ನಿಂದ ಕೆಲಸ ಮಾಡಲು ಸಾಧ್ಯವೇ ಎಂಬ ಪ್ರಶ್ನೆ ಸದಾ ಎದುರುಗೊಳ್ಳುತ್ತಿತ್ತು. ಆ ಪ್ರಶ್ನೆ ಎದುರಾದಾಗಲೆಲ್ಲ ಉತ್ತರ ನೀಡುವ ಛಲವೂ ಗಟ್ಟಿಯಾಗುತ್ತಾ ಹೋಯಿತು. ಕ್ರೀಡೆಯಲ್ಲಿ ಸಾಧಿಸಿದ್ದ ಯಶಸ್ಸು ಆತ್ಮಬಲವನ್ನು ಇಮ್ಮಡಿಗೊಳಿಸಿತು. ಅದರ ಪರಿಣಾಮವೇ ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ಸೋಮನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಪೇಪರ್ ಪ್ಲೇಟ್, ಕಪ್ ತಯಾರಿಸುವ ಕೈಗಾರಿಕೆ ಆರಂಭ!

'ಮಾಹಿತಿ ತಂತ್ರಜ್ಞಾನದ ದೊಡ್ಡ ಕಂಪೆನಿಗಳಲ್ಲೊಂದಾಗಿರುವ ಇನ್ಫೊಸಿಸ್‌ನಲ್ಲಿ ಕೆಲಸ ಸಿಕ್ಕರೆ ಸಾಕು ಜೀವನ ದಡ ಸೇರಿದ ಹಾಗೆಯೇ ಎನ್ನುವವರ ಸಂಖ್ಯೆ ದೊಡ್ಡದಿದೆ. ಆ ಕಂಪೆನಿಯಲ್ಲಿದ್ದ ಕೆಲಸವನ್ನು ಬಿಟ್ಟು, ಸ್ವಂತದ್ದನ್ನು ಏನಾದರೂ ಮಾಡಲೇಬೇಕು ಎಂಬ ಮನದೊಳಗಿನ ಛಲ ಇಲ್ಲಿಗೆ ತಂದು ನಿಲ್ಲಿಸಿದೆ' ಎನ್ನುತ್ತಾರೆ ಶಿವಾನಿ ಇಂಡಸ್ಟ್ರೀಸ್ ಸಂಸ್ಥಾಪಕ ಹಾಗೂ ಮುಖ್ಯ ಕಾರ್ಯ ನಿರ್ವಾಹಕರೂ ಆಗಿರುವ ಸಬ್ಬನಹಳ್ಳಿ ಶಿವಕುಮಾರ್.

ಮದ್ದೂರು ತಾಲ್ಲೂಕಿನ ಸಬ್ಬನಹಳ್ಳಿ ಶಿವಕುಮಾರ್ ಅವರ ಊರು.. ಪುಟ್ಟೇಗೌಡ–ಲಕ್ಷ್ಮಮ್ಮ ದಂಪತಿಯ ಆರು ಮಕ್ಕಳಲ್ಲಿ ನಾನೇ ಹಿರಿಯವ. ಕೃಷಿಯನ್ನೇ ನೆಚ್ಚಿಕೊಂಡಿದ್ದ ಕುಟುಂಬ ಆರ್ಥಿಕವಾಗಿ ಅಂತಹ ಸಬಲವಾಗಿಯೇನೂ ಇರಲಿಲ್ಲ ಎಂದು ಹಳೆಯ ದಿನಗಳ ನೆನಪಿಗೆ ಜಾರುತ್ತಾರೆ. 'ಎರಡು ವರ್ಷದವನಾಗಿದ್ದಾಗ ಪುಟ್ಟ, ಪುಟ್ಟ ಹೆಜ್ಜೆಗಳನ್ನಿಡುತ್ತಾ ಅಚ್ಚುಕಟ್ಟಾಗಿಯೇ ಓಡಾಡುತ್ತಿದ್ದೆ. ಒಂದು ದಿನ ದಿಢೀರ್ ಪೋಲಿಯೊ ಅಟ್ಯಾಕ್ ಆಗಿ ಎರಡೂ ಕಾಲುಗಳು ಸ್ವಾಧೀನ ಕಳೆದುಕೊಂಡವು.

ಯಾರ ನೆರವೂ ಇಲ್ಲದೇ ಸ್ವತಂತ್ರವಾಗಿ ಎದ್ದು ನಿಲ್ಲಲೂ ಆಗದಂತಹ ಸ್ಥಿತಿ ಎದುರಾಯಿತು. ಕೈಗಳೇ ಕಾಲುಗಳಾದವು. 'ಮನೆಯಲ್ಲಿಟ್ಟುಕೊಂಡು ಓದಿಸುವುದು

ಕಷ್ಟ ಎಂದ ಅರಿತ ಮನೆಯವರು, ಮೇಲುಕೋಟೆಯಲ್ಲಿ ಹಿರಿಯ ಗಾಂಧಿವಾದಿ ಸುರೇಂದ್ರ ಕೌಲಗಿ ಅವರು ಅಂಗವಿಕಲರಿಗಾಗಿ ನಡೆಸುತ್ತಿದ್ದ 'ಜನಪದ ಸೇವಾ ಟ್ರಸ್ಟ್'ಗೆ ಸೇರಿಸಿದರು. ಎಂಟನೇ ತರಗತಿವರೆಗೆ ಅಭ್ಯಾಸ ನಡೆಯಿತು. ಅಲ್ಲಿ ಓದಿನೊಂದಿಗೆ ಸ್ವಾವಲಂಬಿ ಬದುಕಿನ ಪಾಠವನ್ನೂ ಕಲಿಸಿದರು. ಅದುವೇ ನನ್ನನ್ನು ಇಲ್ಲಿಗೆ ತಂದು ನಿಲ್ಲಿಸಿದೆ.

'ಮೈಸೂರಿನಲ್ಲಿ ಅಂಗವಿಕಲರಿಗಾಗಿಯೇ ಇರುವ ಜೆಎಸ್‌ಎಸ್ ಕಾಲೇಜಿನಲ್ಲಿ ಡಿಪ್ಲೊಮಾ ಇನ್ ಕಂಪ್ಯೂಟರ್ ಸೈನ್ಸ್ ವ್ಯಾಸಂಗ ಮಾಡಿದೆ. ಮಾಲತಿ ಹೊಳ್ಳ ಅಂತಹವರು ಕ್ರೀಡೆಯಲ್ಲಿ ಸಾಧನೆ ಮಾಡುತ್ತಿರುವುದನ್ನು ಕಂಡು ನಾನೂ ಡಿಪ್ಲೊಮಾ ಓದುವಾಗಲೇ ಅಂಗವಿಕಲರ ಗಾಲಿ ಕುರ್ಚಿ ವಿಭಾಗದಲ್ಲಿ ಜಾವೆಲಿನ್ ಎಸೆತಕ್ಕೆ ಸೇರಿಕೊಂಡೆ.

'ರಾಜ್ಯ, ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಭಾಗವಹಿಸಿ, ಚಿನ್ನದ ಪದಕ ಗೆದ್ದೆ. ಭಾರತ ತಂಡವನ್ನು ಪ್ರತಿನಿಧಿಸಿ, ಇಂಗ್ಲೆಂಡ್, ಮಲೇಷ್ಯಾ, ಸಿಂಗಪುರ, ಬೆಲ್ಜಿಯಂ ಹಾಗೂ ಫ್ರಾನ್ಸ್‌ನಲ್ಲಿ ನಡೆದ ಕ್ರೀಡಾಕೂಟಗಳಲ್ಲಿ ಭಾಗವಹಿಸಿದ್ದೆ. ಮಲೇಷ್ಯಾದಲ್ಲಿ ಕಂಚು, ಬೆಲ್ಜಿಯಂನಲ್ಲಿ ಮೂರು ಬೆಳ್ಳಿ ಪದಕಗಳನ್ನು ಗೆದ್ದುಕೊಂಡಿದ್ದೆ. ರಾಷ್ಟ್ರಮಟ್ಟದಲ್ಲಿ ೧೧ ಚಿನ್ನ, ಏಳು ಬೆಳ್ಳಿ ಹಾಗೂ ೨೦ ಕಂಚಿನ ಪದಕಗಳನ್ನು ಪಡೆದುಕೊಂಡೆ.

'ಅಂತರರಾಷ್ಟ್ರೀಯ ಮಟ್ಟದಲ್ಲಿ ಪದಕಗಳನ್ನು ಗೆದ್ದಿದ್ದರೂ, ಪ್ರೋತ್ಸಾಹದ ಕೊರತೆ ನನ್ನನ್ನು ಕಾಡುತ್ತಿತ್ತು. ವಿದೇಶಗಳಲ್ಲಿ ನಡೆಯುವ ಪಂದ್ಯಾವಳಿಗಳಲ್ಲಿ ಭಾಗವಹಿಸಲು ಆರ್ಥಿಕ ಮುಗ್ಗಟ್ಟು ಎದುರಾಗುತ್ತಿತ್ತು. ಸಾಧನೆಗೆ ಬಹುತೇಕರು ಹೊಗಳುತ್ತಿದ್ದರೇ ಹೊರತು, ಹಣಕಾಸಿನ ನೆರವೇನೂ ಸಿಗುತ್ತಿರಲಿಲ್ಲ. ಪ್ರತಿ ಬಾರಿಯೂ ಬೇರೆಯವರ ಬಳಿ ಆರ್ಥಿಕ ನೆರವಿಗಾಗಿ ಹೋಗುವುದಕ್ಕೆ ಸ್ವಾಭಿಮಾನ ಅಡ್ಡಬರುತ್ತಿತ್ತು. ಪರಿಣಾಮ ಕ್ರೀಡಾಕ್ಷೇತ್ರವನ್ನು ಕೈ ಬಿಡಬೇಕಾಯಿತು.

'ವ್ಯಾಸಂಗ ಪೂರ್ಣಗೊಂಡ ನಂತರ ಬೆಂಗಳೂರಿನಲ್ಲಿ ಇನ್ಫೊಸಿಸ್ ಕಂಪೆನಿಯಲ್ಲಿ 'ಟೆಕ್ನಿಕಲ್ ಸಪೋರ್ಟರ್' ಕೆಲಸಕ್ಕೆ ಸೇರಿದೆ. ಅಲ್ಲಿ ನಾಲ್ಕೂವರೆ ವರ್ಷಗಳ ಕಾಲ ಕೆಲಸ ಮಾಡಿದೆ. ದಿನ ಕಳೆದಂತೆಲ್ಲಾ ಅದೇಕೋ ಸಮಯ ವ್ಯರ್ಥ ಮಾಡುತ್ತಿದ್ದೇನೆ ಅನ್ನಿಸುತ್ತಿತ್ತು. ಸ್ವಂತ ಉದ್ದಿಮೆ ಮಾಡಬೇಕು ಎನ್ನುವ ತುಡಿತದಿಂದಾಗಿ ಅಲ್ಲಿಂದ ಹೊರ ಬಂದೆ.

'ಸಬ್ಬನಹಳ್ಳಿಯಲ್ಲಿಯೇ ಎರಡು ವರ್ಷದ ಹಿಂದೆ ಅತ್ಯಾಧುನಿಕ ರೀತಿಯಲ್ಲಿ ರೂ.೬ ಲಕ್ಷ ವೆಚ್ಚದಲ್ಲಿ ಕುರಿಗಳ ಫಾರ್ಮ್ ಆರಂಭಿಸಿದೆ. ಅದಂತೂ ಚೆನ್ನಾಗಿಯೇ ನಡೆಯುತ್ತಿದೆ. ಗ್ರಾಮದಲ್ಲಿರುವ ಸಹೋದರರೂ ಕೈಜೋಡಿಸಿದ್ದರಿಂದ ಅಲ್ಲಿನ ಕೆಲಸದ ಹೊರೆ ಕಡಿಮೆಯಾಯಿತು. ಆಗಲೂ ಸಮಯ ವ್ಯರ್ಥವಾಗುತ್ತಿದೆ, ಮತ್ತೇನನ್ನಾದರೂ ಹೊಸದು ಮಾಡಬೇಕು ಎನಿಸಲಾರಂಭಿಸಿತು. ಆಗ ಕೈಗಾರಿಕೆ ಘಟಕ ಆರಂಭಿಸಿದೆ.

ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿ ಪ್ರಧಾನಮಂತ್ರಿ ರೋಜ್‌ಗಾರ್ ಯೋಜನೆಯಡಿ ಕಾಗದದ ತಟ್ಟೆ ಮತ್ತು ಲೋಟಗಳನ್ನು ತಯಾರಿಸುವ ಪುಟ್ಟ ಕೈಗಾರಿಕಾ ಘಟಕ ಆರಂಭಿಸಲು ಇಚ್ಛೆಸಿರುವುದಾಗಿಯೂ, ಆರ್ಥಿಕ ನೆರವು ನೀಡುವಂತೆಯೂ ಅರ್ಜಿ ಹಾಕಿದ್ದೆ. ಖಾದಿ ಗ್ರಾಮೀಣ ಕೈಗಾರಿಕಾ ಯೋಜನೆಯಡಿ ರೂ.೨೫ ಲಕ್ಷ ಸಾಲ ಮಂಜೂರಾಯಿತು.

'ಸೋಮನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಆರು ತಿಂಗಳ ಹಿಂದೆ ಕಪ್

ತಯಾರಿಕೆಯ ಕಾರ್ಯಕ್ಕೆ ಚಾಲನೆ ನೀಡಿದ್ದೇನೆ. ೯೦ ಎಂಎಲ್ ಅಳತೆಯ ೫೦ ಸಾವಿರ ಕಪ್‌ಗಳನ್ನು ಪ್ರತಿ ದಿನ ತಯಾರಿಸಲಾಗುತ್ತಿದೆ. ವಾರಕ್ಕೆ ಮೂರು ಲಕ್ಷ ಕಪ್ ತಯಾರಿಸಲಾಗುತ್ತಿದೆ. ಅವುಗಳಿಗೆ ಮಾರುಕಟ್ಟೆ ಒದಗಿಸಲೂ ಬಹಳಷ್ಟು ಶ್ರಮ ಪಡಬೇಕಾಯಿತು. ಆದರೆ, ಈಗ ಪರವಾಗಿಲ್ಲ. ಬೆಂಗಳೂರಿನ ಸಗಟು ಮಾರುಕಟ್ಟೆಗೆ ಪೂರೈಸುತ್ತಿದ್ದೇನೆ. ೧೫೦ ಎಂಎಲ್ ಅಳತೆಯ ಕಪ್‌ಗಳನ್ನು ತಯಾರಿಸಲು ಶೀಘ್ರದಲ್ಲಿಯೇ ಇನ್ನೊಂದು ಯಂತ್ರ ಅಳವಡಿಸಲಾಗುತ್ತಿದೆ.

ಕೈಗಾರಿಕೆ ಘಟಕದ ಕೆಲಸಗಳಿಗೆ ಸಂಬಂಧಿಸಿದ ಓಡಾಟಕ್ಕಾಗಿ ಕಾರು ತೆಗೆದುಕೊಂಡಿದ್ದೇನೆ. ಕಾಲುಗಳಲ್ಲಿ ಶಕ್ತಿ ಇಲ್ಲದೇ ಇದ್ದರೂ ನಾನೇ ಚಾಲನೆ ಮಾಡುತ್ತಿದ್ದೇನೆ. ನನಗೋಸ್ಕರವಾಗಿಯೇ ಷೋರೂಂನವರು ಕಾರಿನ ಬ್ರೇಕ್ ಹಾಗೂ ಆಕ್ಸಿಲೇಟರ್ ನಿಯಂತ್ರಣದ ಲಿವರ್‌ಗಳನ್ನು ಸ್ಟೇರಿಂಗ್ ಬಳಿಯೇ ಅಳವಡಿಸಿಕೊಟ್ಟಿದ್ದಾರೆ. ಹೀಗಾಗಿ ಕಾರು ಚಾಲನೆ ಕಷ್ಟ ಎನಿಸುತ್ತಿಲ್ಲ. ಸ್ವಾವಲಂಬಿ ಸಂಚಾರ ಸರಾಗವಾಗಿಯೇ ಸಾಗಿದೆ.

ಸದ್ಯ ಕಾಗದದ ತಟ್ಟೆ ಮತ್ತು ಕಪ್‌ಗಳನ್ನು ತಯಾರಿಸುವ ಘಟಕದಲ್ಲಿ ಮೂವರಿಗೆ ಉದ್ಯೋಗ ನೀಡಲಾಗಿದೆ. ಸದ್ಯದಲ್ಲೇ ಯಂತ್ರದ ಬದಲು ಕೈಗಳಿಂದಲೇ ಕಾಗದದ ತಟ್ಟೆ ಮತ್ತು ಕಪ್‌ಗಳನ್ನು ತಯಾರಿಸುವ ಘಟಕ ಆರಂಭಿಸಬೇಕೆಂದಿದ್ದೇನೆ. ಆ ಘಟಕದಲ್ಲಿ ಅಂಗವಿಕಲರಿಗೇ ಉದ್ಯೋಗ ನೀಡುವ ಆಲೋಚನೆ ಇದೆ. ಈ ಯೋಜನೆಯಲ್ಲಿ ಹತ್ತಾರು ಅಂಗವಿಕಲರಿಗೆ ಉದ್ಯೋಗ ಸಿಗುವ ಅವಕಾಶವಿದೆ.

ಕುರಿ ಫಾರ್ಮ್ ಚೆನ್ನಾಗಿ ನಡೆಯುತ್ತಿದೆ. ಅದರೊಟ್ಟಿಗೇ ಮೇಕೆ ಸಾಕಾಣಿಕೆಯನ್ನೂ ಆರಂಭಿಸುವ ಆಲೋಚನೆ ಇದೆ. ಕುರಿ ಫಾರ್ಮ್ ಮತ್ತು ಪುಟ್ಟ ಕೈಗಾರಿಕೆ ಘಟಕಗಳು ಯಶಸ್ವಿಯಾಗಿ ನಡೆಯುತ್ತಾ ಉತ್ತಮ ವರಮಾನ ತರಲಾರಂಭಿಸಿದವು. ಬದುಕು ಸರಾಗವಾಗಿಯೇನೂ ಸಾಗುತ್ತಿತ್ತು. ಹಾಗಿದ್ದೂ ಬದುಕಿನ ಬಂಡಿ ಎಳೆಯಲು ಜೋಡಿ ಬೇಕೆನಿಸಿತು. ಮೂರು ವರ್ಷದ ಹಿಂದೆ ಮದುವೆಯಾದೆ. ಶಿವಾನಿ ಎಂಬ ಮಗಳಿದ್ದಾಳೆ. ಈಗ ನಮ್ಮ ಪೇಪರ್ ತಟ್ಟೆ ತಯಾರಿಕೆ ಘಟಕಕ್ಕೆ ಅವಳ ಹೆಸರನ್ನೇ ಇಟ್ಟಿದ್ದೇನೆ.

ನನಗೀಗ ೩೪ ವರ್ಷ. ಈವರೆಗಿನ ಬದುಕಿನ ಹಾದಿಯಲ್ಲಿ ಸಾಕಷ್ಟು ಅವಮಾನ, ಸವಾಲಿನ ಘಟನೆಗಳನ್ನು ಎದುರಿಸಿದ್ದೇನೆ. ಅವೆಲ್ಲವನ್ನೂ ಮೆಟ್ಟಿ ನಿಂತು ಮುನ್ನಡೆದಿದ್ದೇನೆ. ಕ್ರೀಡಾಕ್ಷೇತ್ರದಲ್ಲಿ ಸ್ಪರ್ಧೆಯೊಡ್ಡಿ ಪದಕಗಳನ್ನು ಗೆದ್ದಿದ್ದು ಬದುಕಿನ ನೈಜ ಸವಾಲುಗಳನ್ನು ಎದುರಿಸಲು ಸ್ಫೂರ್ತಿ ನೀಡಿದೆ. ಅಂಗವಿಕಲರನ್ನು ನೋಡಿ ಅನುಕಂಪ ತೋರುವುದಕ್ಕಿಂತ ಅವರಿಗೆ ಸ್ವಂತವಾಗಿ ಏನಾದರೂ ಉದ್ದಿಮೆ ಮಾಡಲು ಅವಕಾಶ ಮಾಡಿಕೊಡಬೇಕು, ಅವರನ್ನು ಪ್ರೋತ್ಸಾಹಿಸಬೇಕು.

ಅವರೂ ಸಾಧಿಸಿ ತೋರಿಸುತ್ತಾರೆ. ಅಂಗವಿಕಲರೂ ತಮ್ಮ ದೇಹಸ್ಥಿತಿ ನೋಡಿಕೊಂಡು ಚಿಂತಿತರಾಗುವ ಬದಲು ಬದುಕಿನ ಹಲವು ಮುಖಗಳತ್ತ ಕಣ್ಣು ಹಾಯಿಸಬೇಕು. ಅವಕಾಶಗಳು ಬಾರದೇ ಇದ್ದರೂ ತಾವೇ ಮುಂದಾಗಿ ಸೃಷ್ಟಿಸಿಕೊಳ್ಳಬೇಕು. ಆಗ ಬದುಕು ಬೇರೆಯದೇ ಕಥೆ ಹೇಳುತ್ತದೆ. ಅಂಗವೈಕಲ್ಯ ಮರೆಯಾಗುತ್ತದೆ.

ಖಾದಿ ವಿಚಾರ

ಖಾದಿ ಎಂದರೆ ಕಾಂಗ್ರೆಸ್ ಪಕ್ಷದ ಸಮವಸ್ತ್ರ. ಕಾಂಗ್ರೆಸಿಗರು ಮಾತ್ರ ಖಾದಿ ಧರಿಸಬೇಕು. ಖಾದಿಯು ಒರಟು ಬಟ್ಟೆ, ಇಸ್ತ್ರಿ ತಡೆಯುವುದಿಲ್ಲ, ತಾಳಿಕೆಗೆ ಬರುವುದಿಲ್ಲ, ಬೇಗೆ ಕೊಳೆಯಾಗುವುದರಿಂದ ತೊಳೆಯಲು ಧೋಬಿ ಖರ್ಚು ಬಹಳ. ಖಾದಿಯು ದುಬಾರಿ ಬಟ್ಟೆ; ಹೀಗೆ ಜನರ ತಪ್ಪು ತಿಳುವಳಿಕೆ!

ಮಾನವನಿಗೆ ಬಟ್ಟೆಯ ಅವಶ್ಯಕತೆ ಏನು ಎಂದು ಸ್ವಲ್ಪ ವಿಚಾರ ಮಾಡಿದಾಗ ಮೊದಲನೆಯದು ಮರ್ಯಾದೆ ಮುಚ್ಚಿಕೊಳ್ಳುವುದು. ಎರಡನೆಯದು ದೈಹಿಕ ಆರೋಗ್ಯ ಕಾಪಾಡುವುದು ಎಂದು ಹೇಳಬಹುದು.

ಖಾದಿ ಎಂದರೆ ಗ್ರಾಮೀಣ ಹೆಣ್ಣು ಮಕ್ಕಳು ತಮ್ಮ ಹೊಲದಲ್ಲಿ ಬೆಳೆದ ಶುದ್ಧ ಹತ್ತಿಯಿಂದ ಪರಿಶುದ್ಧ ವಾತಾವರಣದಲ್ಲಿ ಹತ್ತಿಯ ಯಾವ ನೈಸರ್ಗಿಕ ಗುಣವೂ ನಾಶವಾಗದಂತೆ ಕಲಾತ್ಮಕವಾಗಿ ನೂತು, ಹಳ್ಳಿಯ ನೇಕಾರನೇ ನೇಯ್ದ ಅರಿವೆಯಾಗಿದೆ. ಇದು ಬರೇ ಬಟ್ಟೆ ಎಂಬ ಭಾವನೆ ತಾಳದೆ, ಅದರ ಕೆಲಸಮಾಡುವ ಅಸಹಾಯಕರಿಗೆ ಜೀವನ ಕಲ್ಪಿಸಿಕೊಡುತ್ತಿದ್ದೇವೆ ಎಂಬ ಭಾವನೆ ಮೂಡಿ ಬಂದಾಗ ಖಾದಿ ಕೊಂಡುದರಿಂದ ಸ್ವಾರ್ಥ–ಪರಾರ್ಥ ಎರಡನ್ನೂ ಸಾಧಿಸದಂತಾಗುತ್ತದೆ.

ಖಾದಿಯು ಯಾವ ಪಕ್ಷದ ಸ್ವತ್ತೂ ಅಲ್ಲ. ಅದು ಗ್ರಾಮೋದ್ಯೋಗ, ಗೃಹೋದ್ಯೋಗದ ವಸ್ತು. ಸಮಾಜದೊಡನೆ ಜೀವಿಸಬೇಕೆಂಬ, ಸಮಾಜಕ್ಕೆ ಪೋಷಕರಾಗಬೇಕೆಂಬ ಭಾವನೆ ಇರುವವರೆಲ್ಲರೂ ತೊಡಬಹುದಾದ ವಸ್ತ್ರ. ಈ ಕಾರ್ಯಕ್ರಮಕ್ಕೆ ಮೊದಲಾಗಿ ಚೈತನ್ಯ ಕೊಟ್ಟದ್ದು ಸ್ವಾತಂತ್ರ್ಯಪೂರ್ವದಲ್ಲಿನ ನಮ್ಮ ದೇಶದ ಏಕಮಾತ್ರ ಸಂಸ್ಥೆ 'ಕಾಂಗ್ರೆಸ್'. ಆದ್ದರಿಂದ ಖಾದಿ ಎಂದರೆ ಕಾಂಗ್ರೆಸ್ ಎನ್ನುವ ತಪ್ಪು ತಿಳುವಳಿಕೆ ಬಂದಿದೆ. ಇದರ ಪರಿಣಾಮವೋ ಎಂಬಂತೆ ಇತರ ಎಲ್ಲಾ ರಾಜಕೀಯ ಪಕ್ಷಗಳಿಗೂ ಖಾದಿ ಎಂದರೆ ಒಂದು ತರಹದ ಉಪೇಕ್ಷೆಯ ಭಾವನೆ. ಕಾಂಗ್ರೆಸ್ ಪಕ್ಷದ ಬದಲಾಗಿ, ಬೇರೆ ಪಕ್ಷ ಅಧಿಕಾರಕ್ಕೆ ಬಂದಲ್ಲೆಲ್ಲಾ ಮೊದಲನೇ ಗದಾಪ್ರಹಾರ ಖಾದಿ ಉದ್ಯೋಗದ ಮೇಲಾದದ್ದು ತಿಳಿದು ಬರುತ್ತದೆ. ಖಾದಿ ಉದ್ಯೋಗದಲ್ಲಿ ತೊಡಗಿದ ಸಾವಿರಾರು ಜನರಿಗೆ ಬದಲಿ ಉದ್ಯೋಗ ಕಲ್ಪಿಸಲಾಗದೆ, ಈ ಸರ್ಕಾರಗಳು ತಮ್ಮ ಧೋರಣೆಯನ್ನು ಬದಲಿಸಿ, ಖಾದಿಗೆ ಶರಣು ಹೋಗಬೇಕಾದ ಪ್ರಸಂಗ ಬಂದದ್ದೂ ಉಂಟು. ಇದಕ್ಕೆ ತಮಿಳುನಾಡು ಹಾಗೂ ಕೇರಳ ರಾಜ್ಯಗಳ ಉದಾಹರಣೆ ಇದೆ.

ತಮಿಳುನಾಡಿನಲ್ಲಿ ಡಿ.ಎಂ.ಕೆ ಸರ್ಕಾರವು ಅಸ್ತಿತ್ವಕ್ಕೆ ಬಂದ ಕೂಡಲೆ ಖಾದಿ ಕೆಲಸವನ್ನು ನಿಲ್ಲಿಸಬೇಕೆಂಬ ಧೋರಣೆ ತಾಳಿತು. ನಂತರ ಲಕ್ಷಾಂತರ ನೂಲುಗಾರರ, ಹಾಗೂ ನೇಕಾರರ ಸುಸಂಘಟಿತ ಹೋರಾಟದ ಫಲವಾಗಿ, ಸರ್ಕಾರವು ಈ ಜನರಿಗೆ ಉದ್ಯೋಗ ಕಲ್ಪಿಸಿಕೊಡಲು ಶಕ್ಯವಾಗದ್ದನ್ನು ಕಂಡು, ಕೂಡಲೆ ಡಿ.ಎಮ್.ಕೆ ಲುಂಗಿ ಎಂಬ ವಿಶೇಷ ಅಂಬರ ಚರಖಾ ಖಾದಿಬಟ್ಟೆಯನ್ನು ತನ್ನ ಪಕ್ಷಕ್ಕೆ ಸಮವಸ್ತ್ರವಾಗಿ ಆಯ್ಕೆ ಮಾಡಿತು.

ಕೇರಳದಲ್ಲಿ ಕಮ್ಯೂನಿಸ್ಟ್ ಸರ್ಕಾರವು ಆಡಳಿತಕ್ಕೆ ಬಂದಾಗ ಅದೂ ಸಹ ಖಾದಿಯ ಬಗ್ಗೆ ವಿರುದ್ಧ ಧೋರಣೆ ತಾಳಿತು. ನಂತರ ವಾಸ್ತವಿಕತೆಯ ಅರಿವಾಗಿ ಕೂಡಲೆ ತನ್ನ ಧೋರಣೆಯನ್ನು ಬದಲಿಸಿ, ಕೆಂಪು ಅಂಚಿನ ಲುಂಗಿ ತನ್ನ ಪಕ್ಷದ ಸಮವಸ್ತ್ರವಾಗಿ ಮಾಡಿತು. ಆದರೆ ವಿಚಿತ್ರವೆಂದರೆ ಇಂದಿನ ಕಾಂಗ್ರೆಸ್ ಕಾರ್ಯಕರ್ತರಲ್ಲಿಯೇ ಖಾದಿಯ ಬಗ್ಗೆ ತಿರಸ್ಕಾರ ಭಾವನೆ ಉಂಟಾದದ್ದು.

ಸರ್ವೋದಯ ಆಂದೋಲನದ ಮುನ್ನಡೆ

ಕಳೆದ ಡಿಸೆಂಬರ್ ೮ರಂದು ಕರ್ನಾಟಕ ರಾಜ್ಯ ಸರ್ವೋದಯ ಮಂಡಳಿಯ ಸಭೆಯು ಜನಪದ ಸೇವಾ ಟ್ರಸ್ಟ್ ಆವರಣ ಮೇಲುಕೋಟೆಯಲ್ಲಿ ನಡೆಯಿತು. ಈ ಸಭೆಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ಸದಸ್ಯರು ಭಾಗವಹಿಸದ್ದರು. ವರ್ಣ ಬೇಧ ನೀತಿ ಮತ್ತು ದಮನಕ್ಕೆ ಒಳಗಾದವರ ವಿರುದ್ಧ ಹೋರಾಡಿ ತಮ್ಮ ೯೪ನೇ ವಯಸ್ಸಿನಲ್ಲಿ ಅಸುನೀಗಿದ ಡಾ॥ ನೆಲ್ಸನ್ ಮಂಡೆಲಾ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

ಕರ್ನಾಟಕದ ಪ್ರಸಿದ್ಧ ಚಿಂತಕ ಹಾಗೂ ಕನ್ನಡಕ್ಕೆ ಗಾಂಧೀ ಸಾಹಿತ್ಯ ಪರಿಚಯಿಸಿ ಕೊಟ್ಟ ನೀಲತ್ತಹಳ್ಳಿ ಕಸ್ತೂರಿಯವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಜನವರಿ ತಿಂಗಳನ್ನು ಸರ್ವೋದಯ ಮಾಸವೆಂದು ಆಚರಿಸಬೇಕೆಂದು ಅದಕ್ಕಾಗಿ ಜಿಲ್ಲಾ ಸ್ಥಾನಗಳಲ್ಲಿ ವಿವಿಧ ಸಂಘ–ಸಂಸ್ಥೆಗಳ ಸಹಯೋಗದೊಂದಿಗೆ ಕಾರ್ಯಕ್ರಮ ನಡೆಸಬೇಕೆಂದು ತೀರ್ಮಾನಿಸಲಾಯಿತು.

೨೦೧೪ ಮಾರ್ಚ್ ೧ ಮತ್ತು ೨ರಂದು ವಾರ್ಧಾ ಜಿಲ್ಲೆಯ ಸೇವಾ ಗ್ರಾಮದಲ್ಲಿ ಅಖಿಲ ಭಾರತ ಸರ್ವೋದಯ ಮಂಡಲದ ಅರ್ಧ ವಾರ್ಷಿಕ ಅಧಿವೇಶನ ನಡೆಯಲಿದೆ. ಈ ಅಧಿವೇಶನದಲ್ಲಿ ಅಧ್ಯಕರ ಆಯ್ಕೆಯಾಗುವುದು ಮತ್ತು ದೇಶದಲ್ಲಿಯ ಕೆಲ ಪ್ರಚಲಿತ ವಿಷಯಗಳ ಬಗ್ಗೆ ಚರ್ಚೆ ನಡೆಯುವುದು. ಈ ಅಧಿವೇಶನದಲ್ಲಿ ಲೋಕಸೇವಕರೂ, ಸರ್ವೋದಯ ಮಿತ್ರರೂ ಮತ್ತು ರಾಜ್ಯ ಸರ್ವೋದಯ ಮಂಡಲ ಸದಸ್ಯರುಗಳು ಭಾಗವಹಿಸುವರು.

ಠರಾವು

ಕರ್ನಾಟಕ ರಾಜ್ಯ ಸರ್ಕಾರ ಮೂಢ ನಂಬಿಕೆ ಮತ್ತು ಅಂಧವಿಶ್ವಾಸ ಆಚರಣೆಯನ್ನು ನಿಷೇಧಿಸಿ ಶಾಸನವನ್ನು ಮಾಡಬೇಕೆಂದು ಯೋಚಿಸಿದೆ. ಆ ಬಗ್ಗೆ ಒಂದು ಕರಡು ಮಸೂದೆಯನ್ನು ಬೆಂಗಳೂರಿನ ಕಾನೂನು ವಿಶ್ವ ವಿದ್ಯಾನಿಲಯದ ತಜ್ಞರು ತಯಾರಿಸಿಕೊಟ್ಟಿದ್ದಾರೆ. ಮಹಾರಾಷ್ಟ್ರದಲ್ಲಿ ಇಂಥ ನಿಷೇಧಾಜ್ಞೆಯೊಂದಿದೆ. ನರೇಂದ್ರ ಧಾಬೋಲ್ಕರ್ ಎಂಬ ಪ್ರಗತಿಪರ ವಿಚಾರಕ ಮೂಢನಂಬಿಕೆಯ ವಿರುದ್ಧ ಹೋರಾಡಿ ಅಮರರಾದರು. ಅವರಿಂದ ಪ್ರೇರಣೆ ಪಡೆದ ಕರ್ನಾಟಕದಲ್ಲಿಯ ಪ್ರಗತಿಪರ ಚಿಂತಕರು ಅಂಥ ಒಂದು ನಿಷೇಧಾಜ್ಞೆಗೆ ಒತ್ತಡ ತರುತ್ತಿದ್ದಾರೆ.

ಸ್ವಾಮಿ ವಿವೇಕಾನಂದರು ಹೇಳುವಂತೆ ಮನುಷ್ಯರ ಮನೋವಕ್ರತೆಯು ಭೀಕರವಾಗಿದೆ. ಅಮಾಯಕರ ಶೋಷಣೆಯಾಗುತ್ತಿದೆ. ಅವರು ಬಲಿಪಶುಗಳಾಗುತ್ತಿದ್ದಾರೆ. ಅಂಧಾಚಾರ ಕೂಡದು. ವೈಜ್ಞಾನಿಕ ದೃಷ್ಟಿ ವಿಚಾರಬುದ್ಧಿ ಬೆಳೆಯಬೇಕು. ಅಧೋಗತಿಗೆ ಇಳಿದಿರುವ ಮತಿಯನ್ನು ಆಕಾಶಕ್ಕೆ ಎತ್ತಬೇಕು. ಮತಿಯನ್ನು ತಿರಸ್ಕರಿಸಿದರೆ ಈಶ್ವರನನ್ನು ತಿರಸ್ಕರಿಸಿದಂತಾಗುತ್ತದೆ. ಮೌಢ್ಯ ಈಶ್ವರ ನಿಂದೆ. ಮತಿಯ ಜಾಗೃತಿಗಾಗಿ ಕೈಗೊಳ್ಳಬೇಕೆಂದು ಉದ್ದೇಶಿಸಲಾಗಿರುವ ಮಸೂದೆಯನ್ನು ಆಸ್ತಿಕರ ಭಾವನೆಗೆ ಧಕ್ಕೆ ಬರದ ರೀತಿಯಲ್ಲಿ ಮತ್ತು ಸಾಮಾನ್ಯರ, ಸಾರ್ವಜನಿಕರ, ಬದುಕು, ಆಸ್ತಿ ಗೌರವಕ್ಕೆ ಧಕ್ಕೆ ತರುವಂತಹ ಆತನ ನಂಬಿಕೆಯನ್ನು ಧರ್ಮದ ಸೋಗಿನಲ್ಲಿ ಬಳಸಿಕೊಳ್ಳುವಂತಹ ಯಾವುದೇ ಮತ್ತು ಎಲ್ಲ ಧರ್ಮಗಳ ಮೌಢ್ಯಾಚರಣೆಯನ್ನು ಸರ್ವೋದಯ ಮಂಡಳಿ ಒಗ್ಗಟ್ಟಿನಿಂದ ಖಂಡಿಸುತ್ತದೆ. ಯಾರೊಬ್ಬರ ವೈಯಕ್ತಿಕ ನಂಬಿಕೆ ಆಚರಣೆಗಳನ್ನು ಅವರವರ ಮನೆಯೊಳಗೆ ಮಾಡಿಕೊಳ್ಳಲು ಅವರು ಸ್ವತಂತ್ರರಿರಬೇಕೆಂದು ಮಂಡಳಿ ನೆನಪಿಸುತ್ತದೆ. ಕರ್ನಾಟಕ ರಾಜ್ಯ ಸರ್ವೋದಯ ಮಂಡಳಿ ಮತ್ತು ಮಂಡ್ಯ ಜಿಲ್ಲಾ ಸರ್ವೋದಯ ಮಿತ್ರ ಮಂಡಳ ಈ ವಿಧೇಯಕವನ್ನು ಸರ್ವಾನುಮತದಿಂದ ಸ್ವಾಗತಿಸುತ್ತದೆ.

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ
ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ ಜಿ.ವಿ.ಸಂಪತ್ಕುಮಾರನ್ – ಮೈಸೂರು
ಶ್ರೀ ಕೆ.ನಾಗಣ್ಣಗೌಡರು ; ಶ್ರೀ ವಿ.ಇ.ಲೋಕೇಶ್ – ಮಂಡ್ಯ
ಶ್ರೀ ಬಿ.ಅಪ್ಪಾಜಿಗೌಡರು – ಮದ್ದೂರು

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ

ಶ್ರೀ ಸಿ.ಕನಕರಾಜು – ಮೈಸೂರು

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ–ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ–ಅಂಚೆ

KA / SK / MND / 470 / 2012-2014
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya - 571431. Phone : 08236 316344 / 299854
e-mail : janapada@yahoo.com - web : janapada.net
Printed at Sanketh, Mudrana, Melkote.